# 42

# ಜನರಿಗೆ ನಿಜವಾಗಿ ಸಹಾಯಾದ ಅವಶ್ಯಕತೆಯು ಇದ್ದಾಗ

## ಮತ್ತಾಯ 14:13-21; ಮಾರ್ಕ 6:33-44; ಲೂಕ 9:11-17; ಯೋಹಾನ 6:2-14, ಒಂದು ನಿಕಟ ನೋಟ

ಯೇಸುವಿನ ಬಲು ಪ್ರಮುಖವಾದ ಅದ್ಭುತಕಾರ್ಯಗಳಲ್ಲಿ ಸಾಮಾನ್ಯವಾಗಿ "ಐದು ಸಾವಿರ ಜನರಿಗೆ ಊಣಬಡಿಸಿದ್ದು" ಎಂದೇ ಸೂಚಿತವಾದಂತ ಅದ್ಭುತ ಕಾರ್ಯವೂ ಒಂದಾಗಿದೆ. ಪುನರುತ್ಥಾನವನ್ನು ಹೊರತುಪಡಿಸಿದರೆ ನಾಲ್ಕು ಸುವಾರ್ತೆಯ ಅಂಶಗಳಲ್ಲಿ ದಾಖಲಾದಂತಹ ಒಂದೇ ಒಂದು ಅದ್ಭುತಕಾರ್ಯ ಇದಾಗಿದೆ.[1] ಇದೊಂದೇ ಅದ್ಭುತ ಕಾರ್ಯದ ಘಟನೆಗೆ ಇಷ್ಟೊಂದು ಮಹತ್ವವು ಏಕಿದೆ? ಇದಕ್ಕೆ ಕಾರಣವೇನೆಂದರೆ ಬಹುಶಃ ಇದೊಂದು ಕರ್ತನ "ರಚನಾತ್ಮಕ" ಅದ್ಭುತಕಾರ್ಯವಾಗಿರಬಹುದು.[2] ಇದಕ್ಕೆ ಇನ್ನೊಂದು ಕಾರಣವೇನೆಂದರೆ ಬಹುಶಃ ಅತನು ದೊಡ್ಡ ಸಂಖ್ಯೆಯ ಜನರ ಗುಂಪಿನಿಂದ ಸಾಕ್ಷಿಕರಿಸಲ್ಪಟ್ಟ ಅದ್ಭುತ ಕಾರ್ಯದ ಕಾರಣವೂ ಇದಾಗಿರಬಹುದು. ಕಾರಣವು ಏನೇ ಆಗಿರಲಿ, ಐದು ಸಾವಿರ ಜನರಿಗೆ ಊಣಬಡಿಸಿದ ಯೇಸುವಿನ ಕಥೆಯು ಆದಿ ಕ್ರೈಸ್ತರಿಗೆ ಪ್ರಮುಖವಾದುದು ಆಗಿತ್ತು. ರೊಟ್ಟಿ ಮತ್ತು ಮೀನುಗಳ ಪ್ರದಾನ ಉದ್ದೇಶವು ಆದಿ ಕ್ರೈಸ್ತರ ಕಲೆಗಳಲ್ಲಿ ಸಾಮಾನ್ಯವಾಗಿತ್ತು. ಇಂದಿನ ಕ್ರೈಸ್ತರಿಗೆ ಆ ಘಟನೆಯು ಇನ್ನೂ ವಿಷೇಶ ಅರ್ಥವನ್ನು ಕೊಡುವುದಾಗಿದೆ. ಜನಪ್ರಿಯವಾದ ಸತ್ಯವೇದದ ಕಥೆಗಳಲ್ಲಿನ ತಲೆಯು ಸಾಧಾರಣವಾಗಿ ಎಲ್ಲಾ ಸಮೀಕ್ಷೆಯಲ್ಲಿ, ಈ ಕಥೆಯು ತಪ್ಪದೆ ಪಟ್ಟಿಯ ಮೇಲಿನ ಸ್ಥಾನದಲ್ಲಿ ನಿಲ್ಲುತ್ತದೆ.

ಐದು ಸಾವಿರ ಜನರಿಗೆ ಊಣ ಬಡಿಸಿದ್ದು ವಿವಿಧ ನಿಲುವುಗಳನ್ನು ತಳೆಯುವದಾಗಿದೆ,[3] ಆದರೆ ಯೇಸು ಜನರಿಗೆ ಹೇಗೆ ಸಹಾಯ ಮಾಡಿದನು ಮತ್ತು ನಾನು ಮತ್ತು ನೀನು ಹಾಗೆಯೇ ಮಾಡಬೇಕು ಎಂಬ ಉದ್ದೇಶದಿಂದ ನಾನು ಇದನ್ನು ಉದಾಹರಣೆಯಾಗಿ ಬಳಸುತ್ತೇನೆ. ಹೊಸ ಒಡಂಬಡಿಕೆಯು ಏನಾದರೂ ಬೋಧಿಸುವುದಾದರೆ, ಕ್ರಿಸ್ತನ ಹಿಂಬಾಲಕರಾದಂತವರಾದ ನಾವು ಇತರರ ಅವಶ್ಯಕತೆಯ ಬಗೆಗೆ ಸೂಕ್ಷ್ಮವುಳ್ಳವರಾಗಿರಬೇಕು ಮತ್ತು ಅವರಿಗೆ ಸಹಾಯ ಮಾಡಲು ಪ್ರಯತ್ನಿಸಬೇಕು ಎಂಬುದಾಗಿರುತ್ತದೆ.

> ಆದುದರಿಂದ ಸಮಯವಿರಲಾಗಿ ಎಲ್ಲರಿಗೂ ಒಳ್ಳೆಯದನ್ನೇ ಮಾಡೋಣ; ಮುಖ್ಯವಾಗಿ ಒಂದೇ ಮನೆಯಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ (ಗಲಾತ್ಯ 6:10).

> ದಿಕ್ಕಿಲ್ಲದವರನ್ನೂ, ವಿಧವರೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ (ಯಾಕೋಬ 1:27).

> ಈ ಲೋಕದಲ್ಲಿ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವುದುಂಟೇ? (1 ಯೋಹಾನ 3:17).

ಐದು ಸಾವಿರ ಜನರಿಗೆ ಊಟಬಡಿಸಿದ ಕಥೆಯು ನಿಶ್ಚಿತವಾಗಿ ಅವಶ್ಯಕತೆಗಳನ್ನು ಹೊಂದಿದವರಿಗೆ ಈ ಆಜ್ಞೆಗಳನ್ನು ಹೇಗೆ ಸಂಪೂರ್ಣಗೊಳಿಸಬೇಕು ಮತ್ತು ಹೇಗೆ *ಮಾಡಬಾರದು* ಎಂಬ ಮಹತ್ವದ ತತ್ವಗಳನ್ನು ಒಳಗೊಂಡಿದೆ.

## ಜನರಿಗೆ ಅವಶ್ಯಕತೆಗಳು ಇದ್ದೇ ಇವೆ

ಕಥೆಯ ಮೊದಲ ಭಾಗದ ಪ್ರಮುಖ ಅಂಶವು ಖಂಡಿತವಾಗಿ ನ್ಯಾಯಯುತವಾದ ಅವಶ್ಯಕತೆ ಇದೆ ಎಂಬುದನ್ನು ಎತ್ತಿತೋರಿಸುವುದಾಗಿದೆ.[4] ಇದನ್ನೂ ಈ ಆಜ್ಞೆಗಳನ್ನು ಹೇಗೆ ಸಂಪೂರ್ಣಗೊಳಿಸಬೇಕು ಎಂಬುದನ್ನು ಒಂದು ಪುನರಾವಲೋಕನದಿಂದ ಮತ್ತು ಕೆಲ ಹಿನ್ನಲೆಯ ವಿವರಗಳಿಂದ ಈ ಆಜ್ಞೆಗಳನ್ನು ಹೇಗೆ ಸಂಪೂರ್ಣಗೊಳಿಸಬೇಕು ಎಂದು ಪ್ರಾರಂಭಿಸುವಾ.

ಯೇಸು ಮತ್ತು ಆತನ ಅಪೊಸ್ತಲರು ಗಲಿಲಾಯದ ಸುತ್ತಲೂ ಪ್ರಯಾಣಿಸುತ್ತಿದ್ದರು. ಪ್ರಯಾಣದ ಕೊನೆಯಲ್ಲಿ, ಅವರು ಹೆರೋದನು ಸ್ನಾನಿಕನಾದ ಯೋಹಾನನ ತಲೆಯನ್ನು ಕಡಿಸಿದನು ಎಂಬ ಸುದ್ದಿಯನ್ನು ಕೇಳಿದರು, ಮತ್ತು ಈಗ ಅವರಿಗೆ ತಮ್ಮ ಕಾರ್ಯದಲ್ಲಿ ಆಸಕ್ತರಾಗಿರುವದು ಗಂಡಾಂತರಕಾರಿಯಾಗಿ ಪರಿಣಮಿಸಿತು.[5] ಕ್ರಿಸ್ತನು ಹನ್ನೆರಡು ಜನರಿಗೆ ಗಲಿಲಾಯ ಸಮುದ್ರದ ಪೂರ್ವಕ್ಕೆ ಹೋಗಲು ಸೂಚಿಸಿದನು. ಅವರ ಗುರಿಯು ಗಲಿಲಾಯ ಸಮುದ್ರದ ಉತ್ತರದ ಕೊನೆಯನ್ನು ದಾಟಿ ಏಳು ಅಥವಾ ಎಂಟು ಮೈಲಿಯಿರುವ ಬೆತ್ಸಿದಾ - ಜೂಲಿಯದ ಹತ್ತಿರದ ಮರುಭೂಮಿಯ ಪ್ರದೇಶವಾಗಿತ್ತು.[6] ಸಮುದ್ರವನ್ನು ದಾಟಿ ಹೋಗುವ ಅವರ ಸಮುದ್ರದ ಪ್ರಯಾಣವು ಸಲೀಸಾಗಿರುವುದಾಗಿತ್ತು. ಬಹುಶಃ ಯೇಸು ಮತ್ತು ಕೆಲ ಶಿಷ್ಯರು ತಮ್ಮ ಪ್ರಯಾಣದಲ್ಲಿ ಸಣ್ಣ ನಿದ್ರೆಗೈದಿರಬಹುದು ಎಂದು ನಾನು ನೆನಸುತ್ತೇನೆ (ನೋಡಿ ಮತ್ತಾಯ 8:34).

### ಆಗಿನ ಜನರ ಅವಶ್ಯಕತೆಗಳು

ಅದೇ ಸಮಯದಲ್ಲಿ, ಕಪೆರ್ನೌಮಿನಲ್ಲಿನ ಜನರ ಗುಂಪು ಹೇಗೋ ಯೇಸುವಿನ ಯೋಜನೆಗಳ ಬಗೆಗೆ ತಿಳಿದುಕೊಂಡಿತು ಮತ್ತು "ತಮ್ಮ ಊರುಗಳಿಂದ ಕಾಲ್ನಡಿಗೆಯಿಂದ ಆತನ ಹಿಂದೆ ಬಂದರು" (ಮತ್ತಾಯ 14:13). "... ಕಾಲ್ನಡಿಗೆಯಾಗಿ ಓಡಿ ಅವರಿಗಿಂತ ಮುಂಚೆ ಅಲ್ಲಿ ಸೇರಿದರು" ಎಂದು ಮಾರ್ಕನು ಬರೆಯುತ್ತಾನೆ (ಮಾರ್ಕ 6:33).[7] ವೃದ್ಧರೂ ಮತ್ತು ಬಲಹೀನರೂ ನಿಧಾನವಾಗಿ ಹೆಜ್ಜೆ ಹಾಕುವಾಗ ಒಬ್ಬ ಯೌವನಸ್ಥನು ಮತ್ತು ಎಲ್ಲಾ ರೀತಿಯಿಂದ ಸದೃಢವುಳ್ಳವನು ಸ್ಪರ್ದೆಯಲ್ಲಿ ದಂಡೆಯುದ್ಧಕ್ಕೂ ನಡೆಯುವುದನ್ನು ತಂದರು (ಮತ್ತಾಯ 14:13, 14). ಬಹುಶಃ ಪ್ರತಿಯೊಬ್ಬರು ಜೊತೆಯಾಗಿಯೇ ಪ್ರಾರಂಭಿಸಿದರು, ಆದರೆ ದೊಡ್ಡ ಮರವಣಿಗೆಯು ಸಮುದ್ರದ ಉತ್ತರದ ಕೊನೆಯಲ್ಲಿ ಕಾತುರದಿಂದ ಕಾಯುತ್ತಿತ್ತು.

ಯೇಸುವಿನ ದೋಣಿಯು ದಂಡೆಗೆ ಬಂದಾಗ, ಆತನ ಬರುವಿಕೆಗಾಗಿ ಕಾತುರದಿಂದ ಕಾಯುತ್ತಿದ್ದಂಥ ಜನರ ಗುಂಪು ಆಗಲೇ ಅಲ್ಲಿತ್ತು (ಮಾರ್ಕ 6:33; ಮತ್ತಾಯ 14:14). ಶಿಷ್ಯರು ಆ ಗುಂಪನ್ನು ಕಡು ಗುನುಗುಟ್ಟಿದರೇ?[8] ಅವರು ದಣಿದಿದ್ದರು ಮತ್ತು ಹಸಿದಿದ್ದರು (ಮಾರ್ಕ 6:31); ಯೇಸುವಿನೊಡನೆ ಏಕಾಂಗಿಯಾಗಿರುವುದು ಅವರಿಗೆ ಅವಶ್ಯವಿತ್ತು; ಆದರೆ ಜನಜಂಗುಳಿಯಿಂದ ಎಂದೆಂದಿಗೂ ಇರುವಂಥ ಬೇಡಿಕೆಯು ಇಲ್ಲಿತ್ತು! ಅವರಿಗೆ ಹೇಗೆ ಅನ್ನಿಸಿರಬೇಕೆಂದು ನನಗೆ ಗೊತ್ತು. ನಾನೂ ಸಹ ಒಂದೇ ಸಾರಿ ದೈಹಿಕವಾಗಿ, ಮಾನಸಿಕವಾಗಿ, ಆತ್ಮೀಕವಾಗಿ ಬಹಳಷ್ಟು ಬಳಲಿರುತ್ತೇನೆ, ಆದರೆ ಜನರು ಇನ್ನೂ ನನ್ನ ಸಹಾಯಕ್ಕಾಗಿ ಕೇಳಲು ಬರುತ್ತಲೇ ಇರುತ್ತಾರೆ. ಸ್ವಲ್ಪ ಮಟ್ಟಿನ ದೊಡ್ಡತನಕ್ಕಾಗಿ ನಾನು ಯಾವಾಗಲೂ ಸಹಕರಿಸಲು ಯತ್ನಿಸುತ್ತೇನೆ, ಆದರೆ ಆ ಸಂದರ್ಭದಲ್ಲಿ ನಾನು ನನ್ನ ಅಸಮಧಾನದ ವಿರುದ್ಧ ಹೋರಾಡಬೇಕಾಗುತ್ತದೆ.[9]

ಯೇಸುವಿನ ಪ್ರತಿಕ್ರಿಯೆಯು ನನ್ನದು ಹೇಗಿರಬಹುದಿತ್ತೂ ಹಾಗಿರಲಿಲ್ಲ. ಆತನು "ಕುರುಬನಿಲ್ಲದ ಕುರಿಯ ಹಾಗಿದ್ದಾರಲ್ಲಾ ಎಂದು ಕನಿಕರಪಟ್ಟನು" (ಮಾರ್ಕ 6:34; ನೋಡಿ ಮತ್ತಾಯ 14:14).[10] ಆತನು ಅವರನ್ನು ಬರಮಾಡಿಕೊಂಡನು ಎಂದು ಲೂಕನು ಬರೆಯುತ್ತಾನೆ (ಲೂಕ 9:11).[11] ಆತನು ಅವರನ್ನು ಸೈರಿಸಿಕೊಳ್ಳಲಿಲ್ಲ; ಆತನು ಅವರನ್ನು ಸಹಿಸಿಕೊಳ್ಳಲಿಲ್ಲ; ಆತನು ಅವರನ್ನು *ಬರಮಾಡಿಕೊಂಡನು.* ಅದು ನನ್ನನ್ನು ಚಕಿತಗೊಳ್ಳಿಸುತ್ತದೆ.

ಅವರು ಆತನನ್ನು ಹಿಂಬಾಲಿಸಿದರು ಯಾಕೆಂದರೆ ಮೈಯಲ್ಲಿ ಸ್ವಸ್ಥವಿಲ್ಲದವರನ್ನು ಆತನು ವಾಸಿಮಾಡಿದ ಸೂಚಕಕಾರ್ಯಗಳನ್ನು ಅವರು ನೋಡಿದ್ದರಿಂದಲೇ ಎಂದು ಯೋಹಾನನು ಬರೆಯುತ್ತಾನೆ (ಯೋಹಾನ 6:2). ಕ್ರಿಸ್ತನು ತಕ್ಷಣವೇ "ಕ್ಷೇಮಬೇಕಾದವರಿಗೆ ವಾಸಿ ಮಾಡು"ವುದನ್ನು ಆರಂಭಿಸಿದನು (ಲೂಕ 9:11). ಆತನು ಬೋಧಿಸುವ ಅವಕಾಶವನ್ನು ತಪ್ಪಿಸಿಕೊಳ್ಳದೇ ಇರುವುದರಿಂದ "ದೇವರ ರಾಜ್ಯದ ವಿಷಯವಾಗಿ ಮಾತಾಡಿ" (ಲೂಕ 9:11). "ಆತನು ಅವರಿಗೆ ಬಹಳ ಉಪದೇಶಮಾಡುತ್ತಿದ್ದನು" (ಮಾರ್ಕ 6:43).

ಯೇಸುವಿನ ಜೀವಿತದಲ್ಲಿ ಇದು ಇನ್ನೊಂದು ಉದ್ದನೆಯ ದಿನವಾಗಿತ್ತು. ವಿಶ್ರಾಂತಿಗಾಗಿ ಆತನು ಕ್ವಚಿತ್ತಾಗಿ ಆ ಪ್ರದೇಶದ ಬೆಟ್ಟದ ಹತ್ತಿರ ಹೋಗುತ್ತಿದ್ದನು (ನೋಡಿ ಯೋಹಾನ 6:4, 15). ಹೆಚ್ಚಿನ ಸಮಯವೆಲ್ಲಾ, ಆತನು ಬೋಧನೆಯಲ್ಲೂ ಮತ್ತು ಸ್ವಸ್ಥತಾಕಾರ್ಯದಲ್ಲಿ ನಿರತನಾಗಿರುತ್ತಿದ್ದನು. ಅದೇ ಸಮಯದಲ್ಲಿ, ಹೆಚ್ಚಿನ ಸಂಖ್ಯೆಯಲ್ಲಿ ಜನಸಮೂಹವು ಬೆಳೆಯ ತೊಡಗಿತು (ಯೋಹಾನ 6:5).[12] "... ಹೆಂಗಸರೂ ಮಕ್ಕಳೂ ಅಲ್ಲದೆ ಹೆಚ್ಚು ಕಡಿಮೆ ಗಂಡಸರು ಐದು ಸಾವಿರ" ಎಂದು ನಂತರದಲ್ಲಿ ಗುಂಪಿನ ಬಗೆಗೆ ಹೇಳಲಾಗಿದೆ (ಮತ್ತಾಯ 14:21). ಹೆಂಗಸರು ಮತ್ತು ಮಕ್ಕಳ ಎಣಿಕೆಯಲ್ಲಿ ಹೆಚ್ಚು ಕಡಿಮೆಯಾಗುವುದುಂಟು, ಆದರೆ ಅಲ್ಲಿ ಹತ್ತು ಮತ್ತು ಹದಿನೈದು ಸಾವಿರ ಮಧ್ಯದಲ್ಲಿನ ಸಂಖ್ಯೆಯಲ್ಲಿ ಉಪಸ್ಥಿತವಿದ್ದಿರಬಹುದು.[13]

ದಿನದುದ್ದಕ್ಕೂ, ಯೇಸು ಜನರನ್ನು ಆತ್ಮೀಕವಾಗಿ ಪುನಶ್ಚೇತನಗೊಳಿಸಿದನು, ಆದರೆ ಸಂಜೆಯು ಹತ್ತಿರವಾದಂತೆ, ದೈಹಿಕ ಪುನಶ್ಚೇತನದ ಅವಶ್ಯಕತೆಯು ಗಂಭೀರವಾಗಿ ಪರಿಣಮಿಸಿತು. ಊಟವಿಲ್ಲದೇ ಇಡೀ ದಿನ ಕಳೆಯುತ್ತಾ ಕ್ರಿಸ್ತನು ಮತ್ತು ಆತನ ಶಿಷ್ಯರನ್ನು ಒಳಗೊಂಡು ಸಾವಿರಾರು ಜನರು ಬಯಲಲ್ಲಿ ನೆರೆದಿದ್ದರು. (ಒಂದೇ ಸಾರಿ ಸಾವಿರಾರು ಹೊಟ್ಟೆಗಳು ಗುರ್ರೆನ್ನುವುದನ್ನು ಊಹಿಸಿಕೊಳ್ಳಬಲ್ಲೆಯಾ?) ಕರ್ತನ ಒಮ್ಮೆಲೇ ಕಪೆರ್ನೌಮಿನಿಂದ ಹೊರಹೋಗುವಿಕೆಯು ಮತ್ತು ಜನರ ಗುಂಪಿನ ಯಥೇಚ್ಛವಾದ ಪ್ರತಿಕ್ರಿಯೆಯು ಪ್ರಯಾಣಕ್ಕೆ ಯಾವುದೇ ಸಿದ್ಧತೆಯನ್ನು ಮಾಡಿಕೊಳ್ಳಲು ಅವಕಾಶವನ್ನು ಕೊಡಲಿಲ್ಲ.[14]

ಮೈನವಿರೇಳಿಸುವ ಅದ್ಭುತಕಾರ್ಯಗಳು ಮತ್ತು ಜೀವನವನ್ನು ಬದಲಿಸುವ ಬೋಧನೆಗಳಿಂದ ತುಂಬಿದ ಆ ದಿನಗಳಲ್ಲಿ ದೈಹಿಕ ಆಹಾರದ ಅವಶ್ಯಕತೆಯನ್ನು ಸಾಧರಣವಾಗಿ ಕಾಣಬಹುದಿತ್ತು, ಆದರೆ ಸಮಯದಿಂದ ಸಮಯಕ್ಕೆ ನಮ್ಮ ದೇಹವು ಪುನಶ್ಚೇತನಗೊಳ್ಳಲೇಬೇಕೆಂದು ಆ ರೀತಿಯಲ್ಲಿ ದೇವರು ನಮಗಾಗಿ ಮಾಡಿದ್ದಾನೆ. ನಾವು "ರೊಟ್ಟಿ ತಿಂದ ಮಾತ್ರದಿಂದ ಜೀವಿಸುವುದಿಲ್ಲ" (ಮತ್ತಾಯ 4:4). ಆದರೆ ಎಂದಾದರೊಂದ ದಿನ ಬಿಸ್ಕಟ್ ಅಥವಾ ತುಂಡು ಕಾರ್ನ್ ಬ್ರೆಡ್ ಅವಶ್ಯವಾಗಿ ಮುಂದೆ ಸಾಗಲು ನಮಗೆ ಸಹಾಯಿಸುವವುಗಳಾಗಿವೆ.[15]

ಅದಕ್ಕಾಗಿ ಲಕ್ಷವಹಿಸುವ ಅವಶ್ಯವಿರುವುದಕ್ಕಾಗಿ ತನ್ನ ಶಿಷ್ಯರನ್ನು ಕರೆಯುವುದರಲ್ಲಿ ಯೇಸು ಹಿಂದೆ ಮುಂದೆ ಮಾಡಲಿಲ್ಲ. ಆತನು ಜನರ ಗುಂಪನ್ನು ಮುಖ್ಯವಾಗಿಟ್ಟುಕೊಂಡು "ಇವರ ಊಟಕ್ಕೆ ನಾವು ಎಲ್ಲಿಂದ ರೊಟ್ಟಿಯನ್ನು ಕೊಂಡು ತರೋಣ?" ಎಂದು ಫಿಲಿಪ್ಪನನ್ನು ಕೇಳಿದನು (ಯೋಹಾನ 6:5). ನಂತರ ಆತನು ಅಪೊಸ್ತಲರಿಗೆ "ನೀವೇ ಅವರಿಗೆ ಊಟಕ್ಕೆ ಕೊಡಿರಿ" ಎಂದು ಹೇಳಿದನು (ಮತ್ತಾಯ 14:16). ಜನರ ಗುಂಪಿಗೆ ದೈಹಿಕವಾದ ಮತ್ತು ಆತ್ಮೀಕವಾದ ಆಹಾರದ ಅವಶ್ಯಕತೆಯೂ ಇತ್ತು.

**ಈಗಿನ ಜನರ ಅವಶ್ಯಕತೆಗಳು**

ಇಂದೂ ಸಹ ಜನರು ಅವಶ್ಯಕತೆಗಳನ್ನು ನಿಜವಾದ ಅವಶ್ಯಕತೆಗಳನ್ನು ಹೊಂದಿದ್ದಾರೆ. ಅವರ ಅತಿ ಪ್ರಮುಖವಾದ ಅವಶ್ಯಕತೆ ಎಂದರೆ ಆತ್ಮೀಕತೆಯದ್ದೇ ಆಗಿದೆ. "ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡುಕೊಟ್ಟಾನು?" ಎಂದು ಹೇಳುವಾಗ ಯೇಸು ಇದನ್ನು ಒತ್ತಿ ಹೇಳುವವನಾಗಿದ್ದಾನೆ (ಮತ್ತಾಯ 16:26). ಹೇಗೋ, ಜನರು ಇನ್ನೂ ಇತರ ಅವಶ್ಯಕತೆಗಳನ್ನು ಅಲಕ್ಷಮಾಡದೆ ಇರುವಂಥವುಗಳನ್ನು ಹೊಂದಿರುತ್ತಾರೆ. ಒಬ್ಬ ಮನುಷ್ಯನು ಇನ್ನೊಬ್ಬನಿಗೆ ಜನರು ಹಸಿವೆಯಿಂದಿರುವುದರ ಬಗೆಗೆ ಹೇಳುತ್ತಿದ್ದನು. ಎರಡನೆಯ ವ್ಯಕ್ತಿಯು "ನೀನೇನು ಮಾಡಿದೆ?" ಎಂದು ಕೇಳಿದನು. ಮೊದಲನೆಯವನು "ನಾನು ಅವನಿಗೆ ಕರಪತ್ರ ಹಂಚಿದೆ" ಎಂದು ಉತ್ತರಿಸಿದನು. ಎರಡನೆಯವನು "ಏನಾಗುತ್ತದೆ ಆದರಿಂದ" ಎಂದು ಅಚ್ಚರಿಯಿಂದ ಕೇಳಿದನು. ಆಗ ಆ ಮನುಷ್ಯನು ಆ ಕಥೆಯನ್ನು ದುಃಖದಿಂದ ಹೇಳುತ್ತಾ "ಅವರು ಅದನ್ನು ತಿಂದುಬಿಟ್ಟರು" ಎಂದನು.

ವರುಷ ವರುಷಗಳಿಂದ ನಾವು ಗುರುತಿಸಿರುವ, ಕೆಲ ಅವಶ್ಯಕತೆಗಳು ಎಂದರೆ ಆಹಾರಕ್ಕಾಗಿನ ಮತ್ತು ಬಟ್ಟೆಗಾಗಿನ ಅವಶ್ಯಕತೆಗಳಂತವು ಆಗಿವೆ. ಯಾಕೋಬ 2:15 "ಬಟ್ಟೆಯೂ ಆ ದಿನದ ಆಹಾರವೂ ಇಲ್ಲದವರ" ಬಗೆಗೆ ಮಾತನಾಡುವುದಾಗಿದೆ. ನಾವು ಇತ್ತೀಚೆಗೆ, ನಾಲ್ಕು ಮತ್ತು ಐದನೆಯ ಶತಮಾನದಲ್ಲಿ ಆದಿ ಸಭೆಯ ಕಟ್ಟಡದ ಮೇಲಿನ ಸ್ಲೈಡುಗಳ ಮಂಡನೆಯನ್ನು ನೋಡುತ್ತಿದ್ದೆನು. ಅವುಗಳಲ್ಲಿ ಪ್ರತಿಯೊಂದು ಒಂದು ಅಥವಾ ಹೆಚ್ಚು ಕೋಣೆಗಳು ಅವಶ್ಯವಿದ್ದವರಿಗಾಗಿ ಆಹಾರವನ್ನು ಮತ್ತು ಬಟ್ಟೆಯನ್ನು ಕೂಡಿಸಲು ಪ್ರತ್ಯೇಕವಾಗಿ ಹೊಂದಿರುವವು ಆಗಿದ್ದವು. ಇಂದು ಚರ್ಚ್ ಕಟ್ಟಡವು ಹಲವು ಬಾರಿ ಅದಕ್ಕೆ ಸಮಾನವಾದ ಕೋಣೆಗಳು ಔದಾರ್ಯಕ್ಕಾಗಿ ಇಟ್ಟಿರುವುದುಂಟು.

ಇನ್ನೊಂದು ಅವಶ್ಯಕತೆಯು ವಿಧವೆಯರ ಮತ್ತು ಅನಾಥರ ಕಾಳಜಿಯ ಅವಶ್ಯಕತೆಯು ಸರ್ವರಿಗೂ ತಿಳಿದಿರುವುದೇ ಆಗಿದೆ. "ದಿಕ್ಕಿಲ್ಲದವರನ್ನು ವಿಧವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವುದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವಾದ ಭಕ್ತಿ ..." (ಯಾಕೋಬ 1:27). ಅನೇಕ ಸಭೀಕರು ತಮ್ಮ ವಿಧವೆಯರು ಅಲಕ್ಷಿತವಾಗಬಾರದೆಂದು ಭರವಸೆಯನ್ನು ಕೊಡಲು ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತಾರೆ (ನೋಡಿರಿ ಅಪೊಸ್ತಲರ ಕೃತ್ಯಗಳು 6:1). ಕೆಲ ಕ್ರೈಸ್ತರು ಮನೆಯಿಲ್ಲದ ಮಕ್ಕಳನ್ನು ದತ್ತು ತೆಗೆದುಕೊಂಡಿರುತ್ತಾರೆ. ಮಕ್ಕಳ ಗೃಹ ಮತ್ತು ಸುಶ್ರೂತಾ ಗ್ರಹ ಇಂಥವುಗಳನ್ನು ನೋಡಿಕೊಳ್ಳಲು ಇತರ ವ್ಯವಸ್ಥೆಗಳನ್ನು ಮಾಡಿರುತ್ತಾರೆ. ದಿಕ್ಕಿಲ್ಲದವರನ್ನೂ ವಿಧವೆಯರನ್ನು ನಾವು ಯಾವಾಗಲೂ ಒಳ್ಳೆಯ ರೀತಿಯಿಂದ ಕಾಳಜಿ ಮಾಡುವುದನ್ನು ಒಪ್ಪುವವರಾಗಿರಬೇಕು, ಆದರೆ ಈ ಅವಶ್ಯಕತೆಯ ಬಗೆಗೆ ನಾವು ಕಾಳಜಿಯುಳ್ಳವರಾಗಿರಬೇಕು ಎಂಬುದನ್ನು ನಾವು ಒಪ್ಪಬೇಕು.

ಇತರರು ಸಾಮಾನ್ಯವಾಗಿ ಗುರುತಿಸಲ್ಪಡುವಂಥವುಗಳು ಸೂಚಿತವಾದವುಗಳು ಆಗಿದ್ದು ಅವು ರೋಗಿಗಳಿಗಾಗಿ ಕಾಳಜಿ ತೆಗೆದುಕೊಳ್ಳುವ ಅವಶ್ಯಕತೆಯೇ ಆಗಿದೆ: "ರೋಗದಲ್ಲಿ ಬಿದ್ದಿದ್ದೆನು ನನ್ನನ್ನು ಆರೈಕೆ ಮಾಡುವುದಕ್ಕೆ ಬಂದಿರಿ" ಎಂಬ ಮಾತುಗಳಿಂದ ಪರೋಪಕಾರಿಗಳಾದ ಹಿಂಬಾಲಕರನ್ನು ಆತನು ಶ್ಲಾಘಿಸಿದನು (ಮತ್ತಾಯ 25:36). ಹೆಚ್ಚಿನ ಸಭೆಯವರು ರೋಗಿಗಳಿಗೆ, ಅವರಿಗೆ ಅವಶ್ಯವಿರುವಂಥ ಆಹಾರವನ್ನು ಕೊಡುವುದನ್ನು ಒಳಗೊಂಡು ಇಂಥವನ್ನು ಸಹಾಯಮಾಡುವದಕ್ಕೆ ಪ್ರಯತ್ನಿಸುತ್ತಾರೆ. ಕೆಲ ದೇಶಗಳಲ್ಲಿ, ಕಷ್ಟವನ್ನು ಶಮನಮಾಡುವುದಕ್ಕೋಸ್ಕರ ಸಹಾಯಮಾಡುವುದಕ್ಕಾಗಿ ಆಸ್ಪತ್ರೆಗಳನ್ನು ಕಟ್ಟುತ್ತಾರೆ.

ಇತರರಿಗೆ ಸಹಾಯಿಸುವದು ಪ್ರಸ್ತುತವಾಗಿ ಒಳ್ಳೆಯದನ್ನೇ ಮಾಡುವುದಾಗಿದೆ, ಆದರೆ ಯಾವಾಗಲೂ ಇದಕ್ಕೆ ಜೊತೆಯಾಗಿ ಉದ್ಭವಿಸುವಂತಹ ಅಥವಾ ಕೊನೇಪಕ್ಷ

ಹಳೆಯ ಅವಶ್ಯಕತೆಗಳ ಹೊಸ ಅಭಿವ್ಯಕ್ತಿಯ ವಾಸ್ತವಕ್ಕೆ ನಾವು ಸೂಕ್ಷ್ಮಮತಿಗಳಾಗಿರಬೇಕು.[16] ಮನೆಗಳು ವಿಚ್ಛೇದನದಿಂದಾಗಿ ಹರಿದುಹೋಗುತ್ತಿವೆ. ಮಕ್ಕಳು ನಿರ್ಲಕ್ಷ್ಯಕ್ಕೆ ಅಥವಾ ತೆಗಳಿಕೆಗೆ ಒಳಗಾಗಿದ್ದಾರೆ. ಮಧ್ಯಪಾನೀಯ ಮತ್ತು ಮಾದಕದ್ರವ್ಯಗಳ ವ್ಯಸನವು ಮುಂದುವರೆಯುತ್ತಲೇ ಇದೆ. ಲೈಂಗಿಕವಾಗಿ ವಿವೇಚನಾರಹಿತವಾದ ಲೈಂಗಿಕ ಕಾರ್ಯವು ಮಿತಿಮೀರಿದೆ, ಮತ್ತು ಏಡ್ಸ್‌ನ ವ್ಯಾಪಕತೆಯು ದೋಷದ ಅಲ್ಪ ಚಿಹ್ನೆಯನ್ನು ತೋರಿಸುತ್ತಲೇ ಇದೆ. ಸ್ತ್ರೀ ಮತ್ತು ಪುರುಷರು ಗಂಭೀರವಾದ ಭಾವನಾತ್ಮಕ ಸಮಸ್ಯೆಗಳೊಂದಿಗೆ ಹೋರಾಡುತ್ತಿದ್ದಾರೆ. ನಮ್ಮ ಪಟ್ಟಣಗಳಲ್ಲಿ ಅಸಂಖ್ಯಾತ ಮನೆಯಿಲ್ಲದ “ಬೀದಿಯಲ್ಲಿನ ಜನರ” ಸಂಖ್ಯೆಯು ಬೆಳೆಯುತ್ತಾಯಿದೆ. ಪಟ್ಟಿಯು ಹೀಗೆಯೇ ಬೆಳೆಯುತ್ತಾ ಹೋಗುತ್ತದೆ.

ಈ ಸಮಸ್ಯೆಗಳನ್ನು ಹೇಗೆ ಗುರುತಿಸಬೇಕು ಎಂಬುದಕ್ಕೆ ನನ್ನ ಬಳಿಯಲ್ಲಿ ಉತ್ತರವಿದೆ ಎಂದು ನಾನು ಸೂಚಿಸುವವನಾಗಿದ್ದೇನೆ. ಅದಲ್ಲದೇ ಸಭೆಗಳಾದ ನಾವು, ಈ ಸವಾಲುಗಳನ್ನು ಗುರುತಿಸುವ ಕಾರ್ಯಕ್ರಮಗಳನ್ನು ವಿವರಿಸಬೇಕು. ನಾನು ಮಾಡಲು ಬಯಸುವುದೆಂದರೆ ಅಸ್ಥಿತ್ವದಲ್ಲಿರುವ ಅವಶ್ಯಕತೆಗಳನ್ನು ಅಂದರೆ ಎಲ್ಲಾ ತರದ ಅವಶ್ಯಕತೆಗಳು, ನಿಜವಾದ ಅವಶ್ಯಕತೆಗಳು, ಕ್ರೈಸ್ತರಾದಂಥ ನಾವು ವ್ಯಕ್ತಿಗತವಾಗಿ ನೀಗಬಹುದಾದ ಸಹಾಯದ ನ್ಯಾಯಬದ್ಧವಾದ ಅವಶ್ಯಕತೆಗಳನ್ನು ಒತ್ತಿಹೇಳುವದು.

ನಮ್ಮ ಆದ್ಯತೆಗಳನ್ನು ನೇರವಾಗಿ ಇಟ್ಟುಕೊಳ್ಳಬೇಕೆಂದು, ನಾನು ತಿರುಗಿ ಹೇಳುತ್ತೇನೆ. ಯೇಸು ಕ್ರಿಸ್ತನ ಜ್ಞಾನದಿಂದ ರಕ್ಷಿಸುವತ್ತ ಜನರನ್ನು ತರುವ ಗುರಿಯಿಂದ ನಾವು ಎದೆಗುಂದದೆ ಇರುವವರಾಗಿರೋಣ. ಅದೇ ಸಮಯದಲ್ಲಿ, ದೇವರು ನಮಗಾಗಿ ಸೂಚಿಸಿರುವಂಥದಕ್ಕಿಂತ ಕಡಿಮೆ ಇರುವಂಥ ನಮ್ಮ ಸುತ್ತಲಿರುವ ಒತ್ತಾಯಿಸುವ ಅವಶ್ಯಕತೆಗಳನ್ನು ಅಲಕ್ಷಿಸುವಾ. ಮೊದಲನೆಯ ಶ್ರೇಷ್ಟ ಆಜ್ಞೆಯು “ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ... ಪ್ರೀತಿಸು” ಎಂಬುದಾಗಿದ್ದು ಎರಡನೆಯದು “ನಿನ್ನ ನೆರೆಯವನನ್ನು ನಿನ್ನಂತೆ ಪ್ರೀತಿಸು” ಎಂಬುದಾಗಿರುತ್ತದೆ (ಮತ್ತಾಯ 22:37, 39). ಯೋಹಾನನು ಹೀಗೆ ಬರೆಯುತ್ತಾನೆ:

> ಈ ಲೋಕದ ಸಂಪತ್ತುಳ್ಳ ಯಾವಾನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವುದುಂಟೇ? (1 ಯೋಹಾನ 3:17).
>
> ಒಬ್ಬನು ತಾನು ದೇವರನ್ನು ಪ್ರೀತಿಸುತ್ತೇನೆಂದು ಹೇಳಿ ಸಹೋದರನನ್ನು ದ್ವೇಷಿಸಿದರೆ ಅವನು ಸುಳ್ಳುಗಾರನಾಗಿದ್ದಾನೆ. ತಾನು ಕಂಡಿರುವ ತನ್ನ ಸಹೋದರನನ್ನು ಪ್ರೀತಿಸದವನು ತಾನು ಕಾಣದಿರುವ ದೇವರನ್ನು ಪ್ರೀತಿಸಲಾರನು. ದೇವರನ್ನು ಪ್ರೀತಿಸುವವನು ತನ್ನ ಸಹೋದರನನ್ನು ಪ್ರೀತಿಸಬೇಕೆಂಬ ಆಜ್ಞೆಯನ್ನು ನಾವು ಆತನಿಂದ ಹೊಂದಿದ್ದೇವೆ (1 ಯೋಹಾನ 4:20, 21).

## ಸಹಾಯ ಮಾಡುವುದನ್ನು ತಪ್ಪಿಸುವುದು ಹೇಗೆ

ನಮ್ಮ ಕಥೆಗೆ ಮರಳೋಣ. ಈಗಾಗಲೇ ಸೂಚಿತವಾದಂತೆ, ಜನರ ಗುಂಪಿನ ಅವಶ್ಯಕತೆಯನ್ನು ಯೇಸುವು ತಿಳಿದಿದ್ದನು, ಮತ್ತು ಅವರಿಗೆ ಸಹಾಯಮಾಡಲು ತನ್ನ ಅಪೊಸ್ತಲರಿಗೆ ಹೇಳಿದನು. ಶಿಷ್ಯರ ಪ್ರತಿಕ್ರಿಯೆಯು ಕೆಲ ಸಾರಿ ನಮಗೆ ಸಹಾಯವು ಕೇಳಲ್ಪಟ್ಟಾಗ ನಾವು ತೋರುವ ಪ್ರತಿಕ್ರಿಯೆಗೆ ಸಮಾನವಾಗಿರುತ್ತದೆ.

### “ನಮಗೆ ಯಾವ ಸಂಪನ್ಮೂಲಗಳು ಇಲ್ಲ”

ಕ್ರಿಸ್ತನು ಸ್ಪಷ್ಟವಾಗಿ ಪಿಲಿಪ್ಪನಿಗೆ ಸವಾಲನ್ನೊಡ್ಡಿದನು:

> ಹೀಗಿರಲಾಗಿ ಯೇಸು ಕಣ್ಣೆತ್ತಿ ನೋಡಿದಾಗ ಬಹು ಜನರ ಗುಂಪು ತನ್ನ ಬಳಿಗೆ

> ಬರುವುದನ್ನು ಕಂಡು "ಇವರ ಊಟಕ್ಕೆ ನಾವು ಎಲ್ಲಿಂದ ರೊಟ್ಟಿಕೊಂಡು ತರೋಣ?" ಎಂದು ಫಿಲಿಪ್ಪನನ್ನು ಕೇಳಿದನು. ತಾನು ಮಾಡಬೇಕೆಂದಿದ್ದದ್ದು ತನಗೆ ತಿಳಿದ್ದದರೂ[17] ಅವನನ್ನು ಪರೀಕ್ಷಿಸುವುದಕ್ಕೆ ಈ ಮಾತನ್ನು ಹೇಳಿದನು (ಯೋಹಾನ 6:5, 6).

ಕರ್ತನು ಫಿಲಿಪ್ಪನೊಬ್ಬನನ್ನೇ ಯಾಕೆ ಪ್ರತ್ಯೇಕಿಸಿದನೋ ಎಂಬ ವಿಷಯದಲ್ಲಿ ನನಗೆ ಖಚಿತವಿಲ್ಲ.[18] ಫಿಲಿಪ್ಪನು ಅದೇ ಸ್ಥಳದವನಾಗಿದ್ದನು[19] ಮತ್ತು ಪದಾರ್ಥಗಳು ಸಿಕ್ಕುವ ಮೂಲವನ್ನು ಬಲ್ಲವನಾಗಿದ್ದನು ಎಂದು ಸೂಚಿಸಲ್ಪಟ್ಟಿದೆ. ಕಾರಣವು ಏನೇ ಆಗಿರಲಿ ಫಿಲಿಪ್ಪನಿಗೆ ಕೇಳಲ್ಪಟ್ಟಿತು; ಮತ್ತು ಅಪೊಸ್ತಲನ ಪ್ರತಿಕ್ರಿಯೆಯು ಎಲ್ಲಾ ಸವಾಲುಗಳಿಗೆ ಹೇಗೆ ನಾವು ಪ್ರತಿಕ್ರಿಯಿಸುತ್ತೇವೆಯೋ ಹಾಗೆಯೇ ಅದೇ ರೀತಿಯಾದಾಗಿತ್ತು. ಇದಕ್ಕೆ ಪ್ರತಿಯಾಗಿ ಆತನು "ನಮ್ಮಲ್ಲಿ ಸಂಪನ್ಮೂಲವು ಇದೆಯೋ ಇಲ್ಲವೋ ನೋಡುವಾ" ಎಂದು ಹೇಳಿದನು. ಬೇಗನೇ, ಆತನು ಸಂಖ್ಯೆಯನ್ನು ಅಂದಾಜುಮಾಡಿದನು.[20] ಪ್ರತಿಯೊಬ್ಬ ವ್ಯಕ್ತಿಗೋಸ್ಕರ ಮತ್ತು ಆ ಸಮಯದಲ್ಲಿ ಸೇರಿದ ಜನರ ಗುಂಪಿನ ಸಂಖ್ಯೆಗೆ ಅನುಸಾರವಾಗಿ ಅವಶ್ಯವಾದ ರೊಟ್ಟಿಗೆ ಬೇಕಾದ ಕನಿಷ್ಟ ಹಣವನ್ನು ಗುಣಿಸಿದನು. ನಂತರ ಆತನು ರೊಟ್ಟಿಗೆ ಇರುವ ಹಣವನ್ನು ಮತ್ತು ಜನರ ಗುಂಪಿಗೆ ಆ ಸಮಯದಲ್ಲಿ ರೊಟ್ಟಿಗೆ ಬೇಕಾದ ಹಣವನ್ನು ಗುಣಿಸಿದನು. ನಂತರ ಆತನು ಯೇಸುವಿಗೆ ಈ ಮಹತ್ವವಾದ ಮಾತನ್ನು ಹೇಳಿದನು:[21] "ಒಬ್ಬೊಬ್ಬನಿಗೆ ಸ್ವಲ್ಪ ಸ್ವಲ್ಪ ಸಿಕ್ಕಬೇಕಾದರೆ ಇನ್ನೂರು ಹಣದ ರೊಟ್ಟಿಯಾದರೂ ಸಾಲದು" ಅಂದನು (ಯೋಹಾನ 6:7; ನೋಡಿ ಮಾರ್ಕ 6:37). ಒಂದು ದಿನಾರು ಆ ದಿನಗಳಲ್ಲಿ ಒಬ್ಬ ಸಮಾನ್ಯ ಕೂಲಿಕಾರನ ಸಂಬಳವಾಗಿತ್ತು (ಮತ್ತಾಯ 20:2). ಎರಡು ನೂರು ದಿನಾರಗಳನ್ನು ಗಳಿಸಬೇಕೆಂದರೆ ಒಬ್ಬ ಕಾರ್ಮಿಕನಿಗೆ ಅರ್ಧವರ್ಷಕ್ಕಿಂತಲೂ ಹೆಚ್ಚು ಸಮಯವು ಬೇಕಾಗುತ್ತಿತ್ತು! ಶಿಷ್ಯರ ಹಣದ ಚೀಲವು[22] ಅದರ ಒಂದು ಸಣ್ಣಪ್ರಮಾಣವನ್ನು ಒಳಗೊಂಡಿದ್ದಾಗಿರಬೇಕು.

ಪ್ರತಿಯೊಂದು ಸಮಸ್ಯೆಗೂ ಹಣವೇ ಪರಿಹಾರ, ನಮ್ಮ ಮೊದಲ ಪ್ರತಿಕ್ರಿಯೆಯು ನಾವು ಎಷ್ಟು ಹಣವನ್ನು ಹೊಂದಿದ್ದೇವೆ? ಎಂದು ಪರೀಕ್ಷಿಸುವದು ಅವಶ್ಯ ಎಂದು ನಾವು ತಿಳಿದುಕೊಳ್ಳುವದು ಸರ್ವಸಾಮಾನ್ಯವಾಗಿ ನಾವು ಮಾಡುವುದಲ್ಲವೇ? ಇದು ಒಂದು ವೇಳೆ ವ್ಯಕ್ತಿಗತವಾದ ಸವಾಲು ಆಗಿದ್ದಾದರೆ, ಬಹುಶಃ "ನಮ್ಮ ಹತ್ತಿರ ಈಗ ಹಣವಿಲ್ಲ" ಎಂದು ಬಹುಶಃ ನಾವು ಪ್ರತಿಕ್ರಿಯಿಸಬಹುದು. ಇದು ಸಭೆಯ ಸವಾಲದದ್ದಾರೆ, ನಾವು ಹೀಗೆ ಹೇಳಬಹುದು. "ಈ ಬಜೆಟ್‌ನಲ್ಲಿ ಅದಕ್ಕೋಸ್ಕರ ಹಣವನ್ನು ಎತ್ತಿಡಲಾಗಿಲ್ಲ." ಸಾಮಾನ್ಯವಾಗಿ ಹೇಳುವುದಾದರೆ, ಒಂದು ದೊಡ್ಡದಾದ ಕಾರ್ಯದೊಡನೆ ನಾವು ಸಂಘರ್ಷಕ್ಕಿಳಿಯುವಾಗ ನಾವು ಮಿತಿಯಿಲ್ಲದ ಸಂಪನ್ಮೂಲಗಳನ್ನು ಹೊಂದಿದ ದೇವರ ಮೇಲೆ ಆತುಕೊಳ್ಳುವ ಬದಲು ನಮ್ಮ ಸಂಪನ್ಮೂಲಗಳನ್ನು ನೋಡುತ್ತೇವೆ.

ದೇವರ ಕಾರ್ಯಕ್ಕೆ ಸಂಬಂಧಿಸಿದಂತೆ ಕ್ರೈಸ್ತರು ಕೆಲಸಾರಿ "ವಿಶ್ಲೇಷಣೆಯ ಪಾರ್ಶುವಾಯುವಿನಿಂದ" ಬಳಲುವವರಾಗಿರುತ್ತಾರೆ ಎಂದು ಹೇಳಲ್ಪಟ್ಟಿದೆ. ತಮ್ಮ ಸೇವೆಯು ಈ ಯೋಜನೆಯಲ್ಲಿ ಅಥವಾ ಅದರಲ್ಲಿ ಯಾಕೆ ನಡೆಯದು ಎಂದು ಕೆಲವರು ಯೋಚಿಸುವವರಾಗಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಕೆಲಸಾರಿ ನಾನು ತಪ್ಪಿನಲ್ಲಿದ್ದೇನೆ ಎಂದು ನಾನು ಒಪ್ಪಿಕೊಳ್ಳುವವನಾಗಿದ್ದೇನೆ.

**"ಇದು ನಮ್ಮ ಸಮಸ್ಯೆಯಲ್ಲ"**

ನಂತರ, ಎಲ್ಲಾ ಅಪೊಸ್ತಲರು ಗುಂಪಿನ ಅವಶ್ಯಕತೆಯೊಂದಿಗೆ ಸಂಘರ್ಷಕ್ಕಿಳಿದರು ಮತ್ತು ತಿರುಗಿ ಅವರ ಪ್ರತಿಕ್ರಿಯೆಯಲ್ಲಿ ನಮ್ಮನ್ನು ನಾವು ಕಾಣಬಹುದಾಗಿದೆ: ಹೊತ್ತು ಇಳಿಯುತ್ತಾ ಬಂತು. ಆ ಹನ್ನೆರಡು ಮಂದಿ ಶಿಷ್ಯರು ಆತನ ಬಳಿಗೆ ಬಂದು - "ಈ ಗುಂಪಿಗೆ ಅಪ್ಪಣೆ ಕೊಡು; ಇವರು ಸುತ್ತಲಿರುವ ಹಳ್ಳಿಪಳ್ಳಿಗೆ ಹೋಗಿ ಇಳುಕೊಂಡು[23] ಊಟಕ್ಕೆ ಬೇಕಾದ ಪದಾರ್ಥಗಳನ್ನು ದೊರಕಿಸಿಕೊಳ್ಳಲಿ ..." ಎಂದು ಆತನಿಗೆ ಹೇಳಿದರು (ಲೂಕ 9:12).

ಅವರ “ಪರಿಹಾರವು” ಪ್ರಾಯೋಗಿಕಕ್ಕಿಂತಲೂ ಕಡಿಮೆಯಾದುದ್ದು ಆಗಿತ್ತು. ಹತ್ತರಿಂದ ಹದಿನೈದು ಸಾವಿರ ಜನರು ಆ ಪ್ರದೇಶದ ಚಿಕ್ಕಪುಟ್ಟ ಹಳ್ಳಿಗಳಿಗೆ ಮತ್ತು ಊರುಗಳಲ್ಲಿ ಹರಡಿಕೊಳ್ಳುವ ಗಲಿಬಿಲಿಯಿಂದಾಗುವ ಪರಿಣಾಮವನ್ನು ಊಹಿಸಿಕೊಳ್ಳಿರಿ. ಅನೇಕ ಸಾವಿರಗಟ್ಟಲೆ ಹಸಿದ ಜನರು ನನ್ನ ಚಿಕ್ಕ ಊರಾದ ಜುಡ್ಸೊನಯಾನಲ್ಲಿ ಒಮ್ಮೆಲೆ ಕಾಣಿಸಿಕೊಂಡು ಆಹಾರವನ್ನು ಹುಡುಕತೊಡಗಿದರೆ ಅಲ್ಲಾಗುವ ಗೊಂದಲದ ಪರಿಣಾಮವನ್ನು ಊಹಿಸಿರಿ! ಶಿಷ್ಯರು ಈ ಸಲಹೆಯನ್ನು ಯಾಕೆ ಮಾಡಿದರು? ಬಹುಶಃ ತಮ್ಮಷ್ಟಕ್ಕೆ ತಾವು ಹಸಿವೆಯಿಂದ ಮತ್ತು ದಣಿವಿನಿಂದ ಬಳಲಿರಬಹುದು ಅವರು ಸಮಸ್ಯೆಯೊಂದಿಗೆ ವ್ಯವಹರಿಸಲು ಬಯಸದೆ ಇರುವುದರಿಂದಲೇ.

ದುರ್ದೈವವಶಾತ್, ನಮ್ಮ “ಪರಿಹಾರವು” ಸಹ ಜನರ ಅವಶ್ಯಕತೆಯೊಂದಿಗೆ ಸಂಘರ್ಷಕ್ಕಿಳಿದಾಗ ಹೀಗೂ ಆಗುವದು: “ದೂರಹೋಗು. ನಿನ್ನ ಕಾಳಜಿಯನ್ನು ನೀನು ತೆಗೆದುಕೋ. ಇದು ನನ್ನ ಜವಾಬ್ದಾರಿಯಲ್ಲ. ನಾನುಅದರ ಬಗೆಗೆ ಯೋಚಿಸುವುದಿಲ್ಲ.” ನಾವು ವಿಚಲಿತರಾಗುವುದನ್ನು ನಾವು ಬಯಸೆವು. ಇತರರ ಸಮಸ್ಯೆಯನ್ನು ನಮ್ಮ ಹೆಗಲಿಗೇರಿಸಲು ನಾವು ಬಯಸೆವು. ತಿರುಗೊಂದಾವರ್ತಿ, ನಾನು “ತಪ್ಪನ್ನು” ಪ್ರತಿಪಾದಿಸುತ್ತಿದ್ದೇನೆಯೇ ಎಯದು ಭಯ ಬೀಳುತ್ತೇನೆ.

**“ಅವರು ಅದಕ್ಕೆ ಯೋಗ್ಯರಲ್ಲ”**

ಗುಂಪಿಗೆ ಸಹಾಯಮಾಡದೆ ಇರುವುದಕ್ಕಾಗಿ ಅಪೊಸ್ತಲರು ಇನ್ನೊಂದು ಕಾರಣವನ್ನು ಕೊಡಬಹುದಿತ್ತು. ಉದಾಹರಣೆಗೆ, “ಅವರು ನಮ್ಮ ಸಹಾಯಕ್ಕೆ ಯೋಗ್ಯರಲ್ಲ. ಅವರು ನಿಜವಾಗಿಯೂ ಆತ್ಮೀಕ ಸಂಗತಿಗಳಲ್ಲಿ ಆಸಕ್ತಿಯುಳ್ಳವರಲ್ಲ. ಅವರು ಕೇವಲ ಉಚಿತ ಸ್ವಸ್ಥತೆಗಾಗಿ ಮತ್ತು ಉಚಿತ ಊಟಕ್ಕಾಗಿ ಇಲ್ಲಿದ್ದಾರೆ”[24] ಎಂದು ಅವರು ಹೇಳಬಹುದಿತ್ತು. ಆನಂತರದ ಘಟನೆಗಳು ಅಂಥ ವಿಶ್ಲೇಷಣೆಗಳು ಸರಿ ಎಂದು ಸಾಧಿಸುವವುದ್ದವು; ಗುಂಪಿನಲ್ಲಿಯ ಜನರು ತೋರಿಕೆಯವರಾಗಿದ್ದರು ಮತ್ತು ಅವರ ಆದ್ಯತೆಗಳು ತಪ್ಪಾಗಿವೆ ಎಂದು ಯೇಸುವಿಗೆ ನಂತರದಲ್ಲಿ ಸೂಚಿಸಬಹುದಾಗಿತ್ತು.[25]

ಜನರ ಯೋಚನೆ ಮತ್ತು ಉದ್ದೇಶಗಳನ್ನು ಕ್ರಿಸ್ತನು ತಿಳಿದವನಾಗಿರಬಹುದು (ಯೋಹಾನ 2:25), ಆದರೆ ಅವರಿಗೆ ಸಹಾಯ ಮಾಡದೆ ಇರುವದಕ್ಕಾಗಿ ಅದನ್ನು ನೆಪವಾಗಿ ಬಳಸಲಿಲ್ಲ. ನಾವು ಆಲಸ್ಯವನ್ನಾಗಲಿ ಮತ್ತು ಸೋಮಾರಿತನವನ್ನಾಗಲಿ ಪ್ರೋತ್ಸಾಹಿಸಬಾರದು (2 ಥೆಸಲೋನಿಕ 3:10); ಆದರೆ ಅವಶ್ಯಕತೆಯು ನ್ಯಾಯವಾದದ್ದೇ ಆದರೆ, ನಾವು ಸಹಾಯಿಸಲು ಪ್ರಯತ್ನಿಸಬಹುದು, ಪಡಕೊಳ್ಳುವನು ಯಾರಾಗಿದ್ದಾನೆ ಎಂದಲ್ಲ ಆದರೆ ನಾವು ಯಾರು ಎಂಬುದಕ್ಕಾಗಿಯೇ.[26]

ಸಹಾಯ ಮಾಡದೇ ಇರುವುದಕ್ಕಾಗಿ ಕರ್ತನು ತನ್ನ ಶಿಷ್ಯರ ನೆಪಗಳನ್ನು ಒಪ್ಪಿಕೊಳ್ಳಲಿಲ್ಲ.[27] ಬದಲಾಗಿ, ಆತನು “ನೀವೆ ಅವರಿಗೆ ಊಟಕ್ಕೆ ಕೊಡಿರಿ!” ಎಂದು ಹೇಳಿದನು (ಮಾರ್ಕ 6:37). ಆ ಮಾತುಗಳನ್ನು ಹೇಳುವಾಗ ಆತನ ಕಣ್ಣುಗಳು ಅಲ್ಪವಾಗಿ ಹೊಳೆದಿರಬೇಕಲ್ಲವೇ? “ಸಮಯವಿರಲಾಗಿ ಎಲ್ಲರಿಗೂ ಒಳ್ಳೆಯದನ್ನೇ ಮಾಡೋಣ; ಮುಖ್ಯವಾಗಿ ಒಂದೇ ಮನೆಯಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ” (ಗಲಾತ್ಯ 6:10) ಎಂಬುದರಲ್ಲಿ ವಿಫಲರಾಗುವ ತನ್ನ ಹಿಂಬಾಲಕರ ನೆಪವನ್ನು ಇನ್ನೂ ಆತನು ಒಪ್ಪುವವನಾಗಿರಲಿಲ್ಲ.

## ನಾವು ಹೇಗೆ ಸಹಾಯಿಸಬಹುದು

ಇದು ಕಥೆಯ ನಕಾರಾತ್ಮಕವಾದ ಭಾಗವಾಗಿದೆ. ಈಗ ನಾವು ಸಕಾರಾತ್ಮಕವಾಗಿ ನೋಡೋಣ: ಜನರಿಗೆ ನ್ಯಾಯಬದ್ಧವಾದ ಸಹಾಯವು ಬೇಕಾದಲ್ಲಿ ನಾವು ಆ ಸವಾಲನ್ನು ಹೇಗೆ ನೀಗಿಸಬಹುದು?

### ಯೇಸುವಿನ ಆತ್ಮವನ್ನು ಧರಿಸಿಕೊಳ್ಳುವ ಮೂಲಕ

ಬಲು ಮಹತ್ವದ ಸೂಚನೆಯೆಂದರೆ ನಾವು ಯೇಸುವಿನ ಆತ್ಮವನ್ನು ಧರಿಸಿಕೊಳ್ಳುವದೆ. ಕ್ರಿಸ್ತನಿಗೆ ಜನರ ಗುಂಪಿನ ಮೇಲೆ ಅನುಕಂಪವು ಇತ್ತು ಮತ್ತು ಆತನು ಅವರನ್ನು ಎದುರುಗೊಂಡನು ಎಂಬುದನ್ನು ನೆನಪಿಡಿರಿ. ಅಪೊಸ್ತಲರು ತೊಂದರೆಗಳನ್ನು ನೋಡಿರ ಬೇಕು, ಆದರೆ ಆತನು ಅವರ ಅವಶ್ಯಕತೆಗಳನ್ನು ನೋಡಿದನು.

ಇತರರ ಅವಷ್ಯಕತೆಯ ಪ್ರಜ್ಞೆಯ ಕೊರತೆಯು ಎಲ್ಲಡೆ ಹರಡಿದ ವಿಫಲತೆಯಾಗಿದೆ. ನಿಶ್ಚಿತ ವಾಗಿ, ಇದು ನನ್ನ ಒಂದು ಕೊರತೆ ಆಗಿದೆ. ಬಹಳ ಹಿಂದೇನಲ್ಲ, ಒಂದು ಶವಸಂಸ್ಕಾರದಲ್ಲಿ, ನನ್ನ ಹೆಂಡತಿಯಾದ ಜೊ ತಾಯಿಯನ್ನು ಕಳೆದುಕೊಂಡ ಒಬ್ಬ ಸ್ತ್ರೀಯನ್ನು ಅಪ್ಪಿಕೊಂಡಿದ್ದಳು "ಆಸ್ತ್ರೀಯು ಜೋಗೆ" "ನಾನು ಬಲ್ಲಂತ ಪ್ರೀತಿಯುಳ್ಳ ಸ್ತ್ರೀಯಲ್ಲಿ ನೀನೂ ಒಬ್ಬಳು" ಎಂದು ಹೇಳಿದಳು. ಆ ಒಳ್ಳೆಯ ಯೋಗ್ಯತೆಯ ಸಂಸ್ಕಾರಕ್ಕೋಸರ ಒಂದು ಕಾರಣವು ಇದೆ; ಜೋ ತನ್ನ ಸುತ್ತಲಿರುವಂತವರ ಅವಷ್ಯಕತೆಯ ಬಗೆಗೆ ಒಳ್ಳೆಯ ಅರಿವುಳ್ಳವಳಾಗಿದ್ದಾಳೆ. ನೈಜವೆಂದು ಗುರುತಿಸಲ್ಪಟ್ಟಂತಹ ಇತರರಿಗೆ ತನ್ನ ಕಾಳಜಿಯನ್ನು ತೋರುವವಳಾಗಿದ್ದಾಳೆ ಮತ್ತು ತಪ್ಪದೆ ಸಹಾಯಕ್ಕಾಗಿ ಮಾರ್ಗವನ್ನು ಹುಡುಕುವವಳಾಗಿದ್ದಾಳೇ ಅವಳೊಂದು ವಿಶೇಷ ವರವನ್ನು ಹೊಂದಿದ್ದಾಳೆ.

ತಿರುಗಿ, ನಾವು ಇತರರಿಗೆ ಸಹಾಯ ಮಾಡುವಾಗ ಯೇಸುವಿನ ಆತ್ಮನನ್ನು ತೆಗೆದುಕೊಳ್ಳುವದು ಬಹುಶಃ ಬಲು ಮುಖ್ಯವಾದ ಸೂಚನೆ ಎಂದು ನಾನು ಹೇಳುತ್ತೇನೆ. ಅವಶ್ಯವಿದ್ದವರೆಡೆಗೆ ಕ್ರಿಸ್ತನ ಭಾವನೆಯನ್ನು ಬೆಳಸಿಕೊಂಡಿದ್ದೇ ಆದರೆ, ಇದು ಸಹಾಯಿಸುವ ಮತ್ತು ಯಾವುದೇ ಅಡೆತಡೆಯನ್ನು ತೆಗೆದುಹಾಕುವ ನಮ್ಮ ಅನಪೇಕ್ಷೆತೆಯನ್ನು ಹತ್ತಿಕ್ಕುವುದಾಗಿದೆ. ಅದಲ್ಲದೆ ಕೆಲ ನಿರ್ಧಿಷ್ಟ ಸೂಚನೆಗಳೂ ಸಹ ಸಹಾಯಕವಾಗಿವೆ. ಕಥೆಯೊಡನೆ ಮುಂದುವರೆಯುವಾ.

### ನೀನು ಹೊಂದಿರುವ ಸಂಪನ್ಮೂಲಗಳನ್ನೂ ಬಳಸಿಕೋ

ಫಿಲಿಪ್ಪ ಮತ್ತಿತರ ಶಿಷ್ಯರು ತಾವು ಏನನ್ನು ಹೊಂದಿಲ್ಲವೂ ಅದರ ಮೇಲೆ ಲಕ್ಷವಿಟ್ಟಿದ್ದರು, ಆದರೆ ಯೇಸು ಯಾವ ಸಂಪನ್ಮೂಲವು ಸಿಕ್ಕುವದೋ ಅದನ್ನು ಅರಿತುಕೊಳ್ಳುವುದನ್ನು ಪ್ರೋತ್ಸಾಹಿಸುವವನಾಗಿದ್ದನು. ಆತನು ಅವರಿಗೆ "ನಿಮ್ಮಲ್ಲಿ ಎಷ್ಟು ರೊಟ್ಟಿಗಳಿವೆ? ಹೋಗಿ ನೋಡಿಕೊಂಡು ಬನ್ನಿ" ಎಂದು ಹೇಳಿದನು (ಮಾರ್ಕ 6:38). ಶಿಷ್ಯರ "ಪರಿಹಾರವು" "ಹೋಗಿ ಕೊಳ್ಳಲಿ" ಎಂದಾಗಿತ್ತು (ನೋಡಿರಿ ಮತ್ತಾಯ 14:15; ಮಾರ್ಕ 6:37), ಆದರೆ ಯೇಸುವಿನದು "ಹೋಗಿ ನೋಡಿರಿ: ನೀವೇನನ್ನು ಮಾಡಬಲ್ಲಿರಿ ಎಂಬುದನ್ನು ನೋಡಿರಿ" ಎಂದಾಗಿತ್ತು.

ಪ್ರತ್ಯಕ್ಷವಾಗಿ, ಅವರು ಅಲ್ಲಿರುವ ಪ್ರತಿಯೊಬ್ಬರನ್ನೂ ಪರೀಕ್ಷಿಸಿದರು. ಯೇಸು ಮತ್ತು ಆತನ ಶಿಷ್ಯರು ತಮ್ಮೊಡನೆ ಏನನ್ನೂ ಇಟ್ಟುಕೊಳ್ಳದೆ ಅವಸರದಲ್ಲಿ ಬಂದುಬಿಟ್ಟಿದ್ದರು,[28] ಮತ್ತು ಸಾಮಾನ್ಯವಾಗಿ ಜನರ ಬಗೆಗೆ ಸಹ ಅದು ನಿಜವಾಗಿತ್ತು. ಅಪೊಸ್ತಲರು ಎಲ್ಲವನ್ನೂ ಮೀರಿ ಹುಡುಕಾಡಿದರು. (ಅದನ್ನು ಹತ್ತರಿಂದ ಹದಿನೈದು ಸಾವಿರ ಜನರಲ್ಲಿ ಪರೀಕ್ಷಿಸಲು ಎಷ್ಟು ಸಮಯ ಹಿಡಿದಿರಬಹುದು?) ಹಾಗಿದ್ದಾಗ್ಯೂ ಒಂದೇ ಒಂದು ಆಹಾರವು ಸಿಕ್ಕಿತು ಅದು ಆ ಹುಡುಗನ ಊಟವೇ ಆಗಿತ್ತು. ಆಂದ್ರೆಯನು ಗುರುವಿಗೆ "ಇಲ್ಲಿರುವ ಒಬ್ಬ ಹುಡುಗನ ಬಳಿ ಐದು ಜವೆಗೋಧಿಯ ರೊಟ್ಟಿಗಳೂ ಹಾಗೂ ಎರಡು ಮೀನುಗಳು ಅವೆ; ಆದರೆ ಇಷ್ಟು ಜನರಿಗೆ ಅವು ಯತಾಕ್ಕಾದವು?" ಎಂದು ಹೇಳಿದನು (ಯೋಹಾನ 6:9).

"ರೊಟ್ಟಿಗಳು" ಎಂದು ನೀವು ಓದುವಾಗ ಕುಟುಂಬದವರೆಗೆಲ್ಲ ಊಟದ ಮೇಜಿನ ಮೇಲೆ ಇಡಬಹುದಾದಂಥಹ ದೊಡ್ಡನಾದ ಬೇಕರಿಯವರ ರೊಟ್ಟಿ ಎಂದು ನೀವು ಬಾವಿಸದಿರಿ. ಇವುಗಳು ಚಿಕ್ಕನಾದ ಅಗಲವಾದ ಕೇಕುಗಳ, ತೆಳುವಾದ ಕ್ರಾಕರ್‌ಗಿಂತಲೂ[29] ದೊಡ್ಡದಲ್ಲ.

ಈ ರೊಟ್ಟಿಗಳು ಜವೆಗೋಧಿಯಿಂದ ಮಾಡಲ್ಪಡುತ್ತಿದ್ದವು; ಜವೆಗೋಧಿಯು ಬಡವರ ಆಹಾರವಾಗಿತ್ತು. ಮೀನುಗಳು ಚಿಕ್ಕ ಮೀನಾಗಿದ್ದು ಆ ಪ್ರದೇಶದಲ್ಲಿ ಸಿಕ್ಕುವಂಥವುಗಳಾಗಿದ್ದು; ಸರ್ಡೆನಿಯಾದ ಕರಾವಳಿಯಲ್ಲಿ ಸಿಕ್ಕುವ ಚಿಕ್ಕ ಮೀನಿನ ಬಗೆಗೆ ಯೋಚಿಸಿರಿ.[30] "ಜವೆ ಗೋಧಿಯ ರೊಟ್ಟಿ ಹಾಗೂ ಎರಡು ಮೀನುಗಳು" ಸಾವಿರಾರು ಜನರ ಮಧ್ಯೆ ಒಂದು ಚಿಕ್ಕ ಕೇಕು (ರೊಟ್ಟಿ) ಮತ್ತು ಒಂದು ಚಿಕ್ಕದಾದ ಮೀನು 2,500 ಜನರಿಗೆ ವಿಭಾಗವಾಯಿತು! ಇದು ಒಬ್ಬ ಹಸಿದ ಬಾಲಕನಿಗಾಗುವಷ್ಟಿದ್ದ ಮತ್ತು ಇನ್ನೂ ಹಸಿವೆಯಿಂದಿರುವಷ್ಟು ಜನರಿಗೆ ಆಗುವ ಒಂದು ತಿಂಡಿಯಾಗಿತ್ತು. "ಇಷ್ಟು ಜನರಿಗೆ ಯಾತಕ್ಕಾದಾವು" ಎಂಬ ಆಂದ್ರೇಯನ ಮಾತುಗಳು ಬಲು ಯೋಗ್ಯವಾದವುಗಳಾಗಿದ್ದವು.

ಆ ಬಾಲಕನು ತನ್ನ ಆಹಾರವನ್ನು ಕೊಡಲು ಒಪ್ಪಿದರ ಬಗೆಗೆ ನಾನು ಸ್ವಲ್ಪ ತಡೆದು ಹೇಳುವವನಾಗಿದ್ದೇನೆ. ಬಾಲಕರು ತಿನ್ನುವುದನ್ನು ಎಷ್ಟು ಪ್ರೀತಿಸುತ್ತಾರೆಂಬುದನ್ನೂ ತಿಳಿದಂಥ ಒಬ್ಬರು "ರೊಟ್ಟಿಗಳ ಸಂಖ್ಯೆ ಹೆಚ್ಚಿಸುವುದಕ್ಕಿಂತಲೂ ಬಾಲಕನು ಆಹಾರವನ್ನೇ ಕೊಟ್ಟದ್ದೇ ದೊಡ್ಡ ಅದ್ಭುತಕಾರ್ಯವಾಗಿದೆ" ಎಂದು ತಮಾಷೆ ಮಾಡಿದರು. ಮುಖ್ಯವಾಗಿ, ಈ ಮಗುವು ಮಾಡಿದಂತಹ ಈ ಕೊಡುಗೆಯು ಗುರುತರವಾದದ್ದನ್ನು ಮಾಡಿತು. ಆತನು ಚಿಕ್ಕವನಾಗಿದ್ದಾಗ್ಯೂ, ಆತನು ಕರ್ತನಿಂದ ಪ್ರಭಾವಿತನಾದನು ಮತ್ತು ಆತನಲ್ಲಿ ನಂಬಿಕೆಯಿಟ್ಟಿದ್ದನು ಎಂದು ನಾನು ಇದನ್ನು ಕೇವಲ ಸಮಾರೋಪಿಸುವವನಾಗಿದ್ದೇನೆ. ಇದು ಅದ್ಭುತ ವಾದದ್ದಲ್ಲವೇ?

ತಾವು ಬಹುವಾಗಿ ಹೊಂದದಿದ್ದಾಗಲೂ, ತಾವು ಕೆಲವನ್ನಾದರು ಹೊಂದಿರುವುದನ್ನು ತನ್ನ ಹಿಂಬಾಲಕರು ಅರಿಯಬೇಕೆಂದು ಯೇಸು ಬಯಸಿದ್ದನು. ನಮ್ಮಲ್ಲಿ ಹೆಚ್ಚಿನವರು *ನಾವು ಏನನ್ನು ಮಾಡಬಹುದು* ಮತ್ತು ನಾವು ಮಾಡಲು ಸಮರ್ಥವಿರುವ ಸಂಗತಿಗಳಿಗಿಂತ ನಾವು *ಏನನ್ನು ಮಾಡಲಾಗದು* ಮತ್ತು ಮಾಡಲು *ಸಮರ್ಥವಿಲ್ಲದವುಗಳನ್ನು* ಪಟ್ಟಿ ಮಾಡುವುದರಲ್ಲಿ ಉತ್ತಮ ಯಾದಿಗಾರರು ಆಗಿರುತ್ತೇವೆ. ನಿಮ್ಮ ಸ್ವತ್ತು ಮತ್ತು ತಲಾಂತುಗಳು ಬಲು ಅತ್ಯಲ್ಪವಾದವುಗಳು, ಆದರೆ ಏನೇ ಆಗಲಿ ಅವುಗಳನ್ನು ದೇವರಿಗೆ ಸಮರ್ಪಿಸಿರಿ. ಆತನು ನಿಮ್ಮನ್ನು ಪರಿಣಾಮಗಳಿಂದ ಆಶ್ಚರ್ಯಗೊಳಿಸುವನು!

## ಕರ್ತನ ಸಂಪನ್ಮೂಲಗಳ ಮೇಲೆ ಆರಿತುಕೊಳ್ಳಬೇಕೇ,
## ಹೊರತು ನಿಮ್ಮ ಸ್ವಂತವುಗಳ ಮೇಲೆ ಅಲ್ಲ

ದೇವರ ಸೇವೆಯಲ್ಲಿ ನಿಮ್ಮ ಸಂಪನ್ಮೂಲಗಳನ್ನು ಉಪಯೋಗಿಸುವಾಗ, ಭೂಮ್ಯಾಕಾಶಗಳ ಒಡೆಯನಾದಂಥವನ ಜೊತೆ ಕೆಲಸಗಾರರಾಗುವೆವು ಎಂಬುದನ್ನು ತಿಳಿದುಕೊಳ್ಳಿರಿ (ಆದಿಕಾಂಡ 14:22)! ಮುಂದೆ, ಆತನ ಕಾರ್ಯದಲ್ಲಿ ನಿಮ್ಮನ್ನು ಅಲ್ಪವಾಗಿ ಸಮರ್ಪಿಸಿಕೊಂಡಿದ್ದೇ ಆದರೆ ಆ ಅಲ್ಪವುಗಳಿಂದಲೇ ಆತನು ಅದ್ಭುತವಾದವುಗಳನ್ನು ಮಾಡುತ್ತಾನೆ ಎಂಬುದನ್ನು ಅರಿತುಕೊಳ್ಳಿರಿ. ಕರ್ತನ ಕೈಯಲ್ಲಿ ಅಲ್ಪವಾದದ್ದೂ ಕೂಡಾ ಹೆಚ್ಚಾದದ್ದೇ ಎಂದು ಯಾವಾಗಲೂ ಹೇಳುವುದಾಗಿದೆ. ನಾವು ಅಧ್ಯಯನ ಮಾಡುವ ಘಟನೆಗಿಂತಲೂ ಉತ್ತಮವಾದ ದೃಷ್ಟಾಂತವು ಇನ್ನೊಂದಿಲ್ಲ.

ನೀವು ಕಥೆಗೆ ಚಿರಪರಿಚಿತರಾಗಿದ್ದೀರಿ: ಯೇಸು ಅಪೊಸ್ತಲರಿಗೆ "ಆ ಜನರನ್ನು ಊಟಕ್ಕೆ ಕೂಡ್ರಿಸಿರಿ" ಎಂದು ಹೇಳಿದನು (ಯೋಹಾನ 6:10).[31] "ಎಲ್ಲರೂ ... ಪಕ್ತಿಪಂಕ್ತಿಯಾಗಿ ಕೂತುಕೊಳ್ಳಲಿ ಎಂದು ಅಪ್ಪಣೆಕೊಟ್ಟಾಗ ... ಪಂಕ್ತಿಗೆ ನೂರರಂತೆ ಐವತ್ತರಂತೆ ಸಾಲುಸಾಲಾಗಿ ಕೂತುಕೊಂಡರು" (ಮಾರ್ಕ 6:39, 40). ಯೇಸು ಅವರನ್ನು ಯಾಕೆ ಆ ರೀತಿಯಲ್ಲಿ ಕೂಡಿಸಿದನು ಎಂಬುದಕ್ಕೆ ಬಹುಶಃ ಅನೇಕ ಕಾರಣಗಳು ಇರಬಹುದು. ಅಂಥ ವ್ಯವಸ್ಥೆಯು ಅವರನ್ನು ಊಟಮಾಡಿಸುವಲ್ಲಿ ಸಹಾಯಿಸಬಹುದಾಗಿವೆ. ಹತ್ತು ಸಾವಿರ ಹಸಿದ ಜನರು, ಯೇಸುವಿನ ಸುತ್ತಲೂ ನುಗ್ಗುತ್ತಿದ್ದಾರೆ ಮತ್ತು ಸ್ಥಳಕ್ಕಾಗಿ ಜಗ್ಗಾಡುತ್ತಿದ್ದಾರೆ ಎಂಬುದನ್ನು ನೀನು

ಊಹಿಸಿಕೊಳ್ಳಬಲ್ಲೆಯಾ? ಇದಕ್ಕೆ ಜೊತೆಯಾಗಿ ಯಾರೊಬ್ಬರೂ ಉಳಿದುಕೊಂಡಿಲ್ಲ ಎಂಬುದು ನಿಶ್ಚಿತವಾದುದ್ದು ಆಗಿದೆ. ಇದು ಗುಂಪಿನ ಲೆಕ್ಕವನ್ನಿಡುವುದಕ್ಕೂ ಸಹಾಯಮಾಡುವದು ಮತ್ತು ಅದ್ಭುತಕಾರ್ಯವನ್ನು ದೃಢಿಕರಿಸಲು ಸಹಾಯಿಸುವದು ಎಂಬುದು ಸಹ ಸಾಧ್ಯವಿದೆ.

**ನಿಮಗೆ ಅರ್ಥವಾಗಿರಲಿ ಅಥವಾ ಅರ್ಥವಾಗದಿರಲಿ,**
**ಕರ್ತನು ಹೇಳಿದ್ದನ್ನು ಮಾಡಿರಿ**

ಜನಜಂಗುಳಿಯನ್ನು ಕೂಡಿಸಿದ್ದಕ್ಕಾಗಿ ಹನ್ನೆರಡೂ ಮಂದಿ ತಾವು ಮೂರ್ಖರಾದೆವು ಎಂದುಕೊಂಡರೋ? ಐದು ರೊಟ್ಟಿ ಮತ್ತು ಎರಡು ಮೀನುಗಳು ಅಲ್ಲಿ ಲಭ್ಯವಿರುವಾಗ ಊಟಕ್ಕಾಗಿ ಕೆಳಗೆ ಕೂತಕೊಳ್ಳಿರಿ ಎಂದು ಹೇಳಲ್ಪಟ್ಟಾಗ ಅಲ್ಲಿ ಉಪಸ್ಥಿತವಿದ್ದವರು ಆಶ್ಚರ್ಯದ ನೋಟವನ್ನು ಬೀರಿರಲಿಕ್ಕಿಲ್ಲವೇ? ಕರ್ತನು ಅದನ್ನು ಮಾಡಲು ಅವರಿಗೆ ಹೇಳಿದ್ದನು. ಯಾವುದೇ ಸಾಹಸದಲ್ಲಿ ಮೊದಲನೆಯ ಹೆಜ್ಜೆಯಲ್ಲಾದ ಯಶಸ್ಸು ನಮ್ಮ ಸಂಪನ್ಮೂಲಗಳನ್ನು ಅಳತೆಮಾಡುವುದಲ್ಲ ಆದರೆ ಅವು ದೇವರ ಚಿತ್ತವನ್ನು, ಸಂಕಲ್ಪಿಸುವವುಗಳು ಮತ್ತು ಅವುಗಳನ್ನು ಮಾಡುವವುಗಳು ಆಗಿವೆ.

ಪ್ರತಿಯೊಂದು ಸಿದ್ಧವಾದಾಗ, ಕ್ರಿಸ್ತನು ಆಶೀರ್ವಾದದ ಮೂಲಕ್ಕಾಗಿ "ಐದು ರೊಟ್ಟಿ ಎರಡು ಮತ್ತು ಮೀನುಗಳನ್ನು ತೆಗೆದುಕೊಂಡು ಆಕಾಶದ ಕಡೆಗೆ ನೋಡಿ ..." (ಯಾಕೋಬ 1:17), ಆಹಾರಕ್ಕಾಗಿ ಸ್ತೋತ್ರವನ್ನು ಹೇಳುವ ಮೂಲಕ (ನೋಡಿ ಯೋಹಾನ 6:11, 23) "ಆತನು ಆಹಾರವನ್ನು ಆಶಿರ್ವದಿಸಿದನು" (ಮತ್ತಾಯ 14:19).[32] ಊಟಕ್ಕಿಂತ ಮುಂಚಿನ ಯೆಹೂದಿ ಪ್ರಾರ್ಥನೆಯು ಬಹು ಸರಳವಾಗಿತ್ತು: "ಸೃಷ್ಟಿಸಿದಾತನಿಗೆ ಆಶೀರ್ವಾದ, ಯೆಹೋವನು ನಮ್ಮ ದೇವರು, ಸೃಷ್ಟಿಯ ಅರಸನು, ನಮ್ಮ ಮುಂದಿನ ಆಹಾರವನ್ನು ಭೂಮಿಯಿಂದ ತಂದವನು ಆತನೇ" ಎಂಬುದಾಗಿತ್ತು.[33] ಬಹುಶಃ ಯೇಸುವೂ ಇದಕ್ಕೆ ಸಮಾನವಾದ ಪದಗಳನ್ನೇ ಬಳಸಿದನು.

ನಂತರ ಬಂದಿರುವದು ಮನವನ್ನು ದಿಗಿಲುಗೊಳಿಸುವ ಭಾಗವು: "ರೊಟ್ಟಿಯನ್ನು ಮುರಿದು ಅವುಗಳನ್ನು ಅವರಿಗೆ [ಜನರಿಗೆ; ಲೂಕ 9:16]; ಕೊಡುವುದಕ್ಕಾಗಿ ಶಿಷ್ಯರ ಮುಂದೆ ಇಟ್ಟನು; ಮತ್ತು ಆತನು ಅವರೆಲ್ಲರಿಗೋಸ್ಕರವಾಗಿ ಎರಡು ಮೀನುಗಳನ್ನು ಭಾಗಮಾಡಿದನು" (ಮಾರ್ಕ 6:41). "ಒಂದು ನಿಮಿಷ ತಡೆಯಿರಿ! ನನಗೆ ಹೆಚ್ಚಿನದನ್ನು ಹೇಳಿರಿ! ಇದು ಹೇಗೆ ಕಾಣುತ್ತದೆ ಎಂದು ನನಗೆ ಸರಿಯಾಗಿ ಹೇಳಿರಿ! ಏನು ಸಂಭವಿಸಿತೆಂಬುದರ ವಿವರಣೆಯನ್ನು ಕೊಡಿರಿ!" ಎಂದು ನಾನು ಕೂಗಬಯಸುತ್ತೇನೆ. ಮತ್ತೊಂದು ಸಾರಿ (ಅದು ನಮಗೆ ಅವಶ್ಯವಾದದ್ದಾದರೆ ಮಾತ್ರ), ಬೈಬಲ್ ನಮ್ಮ ಕುತೂಹಲವನ್ನು ತಣಿಸುವುದಕ್ಕಾಗಿ ಬರೆಯಲ್ಪಟ್ಟಿಲ್ಲ ಎಂಬುದಕ್ಕೆ ನಮಗೆ ಆಧಾರವು ಇದೆ.

ಏನು ಸಂಭವಿಸಿತೆನ್ನುವುದರ ಬಗೆಗೆ ನೋಡುವುದಾದರೆ ಅದ್ಭುತ ಸಂಭವಿಸಿದ್ದು ವಿಶೇಷವಾಗಿ ಯೇಸುವಿನ ಕೈಯಲ್ಲಿಯೇ, ಎಂದು ನಾನು ದೃಢವಾಗಿ ಹೇಳುವವನಾಗಿದ್ದೇನೆ. ಯೇಸು ಪ್ರತಿಯೊಬ್ಬ ಅಪೊಸ್ತಲರಿಗೆ ಬುಟ್ಟಿಗಳ ತುಂಬಾ ಕೊಟ್ಟನು ಮತ್ತು ಆ ಆಹಾರವು ಅವರು ಹಂಚುತಿದ್ದ ಹಾಗೆ ಅವರ ಬುಟ್ಟಿಗಳಲ್ಲಿ ಬೆಳೆಯಿತು. ವೇದಭಾಗವು ಇದನ್ನು ಒತ್ತಿಹೇಳುವುದಾಗಿದೆ, ಹೇಗೂ, "ಆತನು [ಜನರಿಗೆ] ಕೊಡುವುದಕ್ಕಾಗಿ ಶಿಷ್ಯರ ಕೈಗೆ [ರೊಟ್ಟಿಗಳನ್ನು] ಕೊಟ್ಟನು" (ಮಾರ್ಕ 6:41).[34] ಇನ್ನೊಂದು ಮಾತಿನಲ್ಲಿ, ಶಿಷ್ಯರು ತಮ್ಮ ಬುಟ್ಟಿಗಳನ್ನು[35] ತುಂಬಿಕೊಂಡೇ ಹಿಂತಿರುಗಿ ಬಂದರು. ಒಬ್ಬರು ಹೀಗೆ ಹೇಳುತ್ತಾರೆ ಯೇಸು ಅಡುಗೆಯ ಮುಖ್ಯಸ್ಥ ಮತ್ತು ಶಿಷ್ಯರು ಕೇವಲ ಪರಿಚಾರಕರು ಎಂದರು.[36]

ನನಗೆ ಊಹಿಸಲು ಹೇಳಿದ್ದಾದರೆ, ಎಲೀಯನ ಸಮಯದಲ್ಲಿ ವಿಧವೆಯ ಮೊಗೆಯಲ್ಲಿ ಎಣ್ಣೆ ಮಡಿಕೆಯಲ್ಲಿನ ಹಿಟ್ಟು ತಿರದೆ ಇರುವುದಕ್ಕೆ ಸಮಾನವಾದದ್ದು ಎಂದು ನಾನು ಊಹಿಸುವವನಾಗಿದ್ದೇನೆ (1 ಅರಸು 17:14-16) - ಯೇಸು ಆ ಚೀಲವನ್ನು ಅಥವಾ ಆ

ಬುಟ್ಟಿಯನ್ನು ಆ ಬಾಲಕನು ತನ್ನ ತಿಂಡಿಯನ್ನು ಕೂಡಿಸಿಟ್ಟುಕೊಂಡತ್ತ ಮುಟ್ಟಿಸುತ್ತಿದ್ದಾನೆ ಮತ್ತು ಹೆಚ್ಚು ಹೆಚ್ಚು ರೊಟ್ಟಿ ಮತ್ತು ಮೀನುಗಳನ್ನು ನೂಕುತ್ತಲೇ ಇದ್ದಾನೆ. (ಅಲ್ಲಿ ಇದ್ದದ್ದು ಹೆಚ್ಚು ಹೆಚ್ಚಾಗಿ ಬೆಳೆಯುತ್ತಿರುವುದನ್ನು ನೋಡಿ ಕ್ರಿಸ್ತನ ಕಣ್ಣುಗಳು ಅಗಲಾಗಿ ಮುಖದ ಮೇಲೆ ಮುಗುಳ್ನಗೆಯು ಬಂದುದನ್ನು ನಾನು ನೋಡಬಲ್ಲೆ.) ನಿಖರವಾದ ವಿವರಣೆಗಳನ್ನು ಅರಿಯುವದು ಇಲ್ಲಿ ಪ್ರಮುಖವಾದದ್ದಲ್ಲ. ಒಂದು ನಿಜ ಅದ್ಭುತ ಕಾರ್ಯವು ನಡೆಯಿತು ಎಂಬುದನ್ನು ಅರಿತುಕೊಂಡರೆ ಸಾಕು. ಅದು ನಿಜವಾಗಿ ನಡೆಯಿತು.

ಮತ್ತಾಯ, ಮಾರ್ಕ, ಮತ್ತು ಲೂಕರ ವಿವರಣೆಯಂತೆ, ಜನರು “ತೃಪ್ತರಾಗುವ ತನಕ ತಿಂದರು” ಎಂದಿದೆ (ಮತ್ತಾಯ 14:20; ಮಾರ್ಕ 6:42; ಲೂಕ 9:17). ಯೋಹಾನನು “ಅವರು ಬೇಕಾದಷ್ಟು ತಿಂದರು” ಮತ್ತು “ಅವರು ತೃಪ್ತರಾದರು” ಎಂದು ಒತ್ತಿ ಹೇಳಿದ್ದಾನೆ (ಯೋಹಾನ 6:11, 12). ಮರುದಿನವೂ ಕೂಡ ಜನರ ಗುಂಪು ಅದಕ್ಕಿಂತ ಹೆಚ್ಚಿನದನ್ನು ನೋಡುವವರಾದರು (ಯೋಹಾನ 6:26, 27, 34), ಯೇಸು ಅವರ ವಿಶೇಷ ಊಟದ ಗುಣಮಟ್ಟವನ್ನು ಇನ್ನೂ ಸುದಾರಿಸಬಹುದು ಒಣಗಿದ, ಒರಟಾದ ಜವೆಗೋಧಿಯ ರೊಟ್ಟಿ ಮತ್ತು ಉಪ್ಪಿನ ಮೀನುಗಳಂತವು ರಾಜಭೋಗಗಳು ಆಗಬಹುದು.

ಪ್ರತಿಯೊಬ್ಬರೂ ಸಂತೃಪ್ತರಾದಾಗ, ಕ್ರಿಸ್ತನು ತನ್ನ ಶಿಷ್ಯರಿಗೆ “ಮಿಕ್ಕ ತುಂಡುಗಳನ್ನು ಕೂಡಿಸಿರಿ; ಇದರಲ್ಲಿ ಯಾವದೂ ವ್ಯರ್ಥವಾಗಬಾರದು” ಎಂದು ಹೇಳಿದನು (ಯೋಹಾನ 6:12), ಮತ್ತು “ರೊಟ್ಟಿತುಂಡುಗಳನ್ನೂ ಮೀನಿನ ತಂಡುಗಳನ್ನೂ ಕೂಡಿಸಲಾಗಿ ಹನ್ನೆರಡು ಪುಟ್ಟಿ ತುಂಬಿತು” (ಮಾರ್ಕ 6:43).[37] ಕಥೆಯ ಈ ಭಾಗವು ಕರ್ತನು ಸಂಪನ್ಮೂಲಗಳನ್ನು ವ್ಯರ್ಥಮಾಡುವವರನ್ನು ಮೆಚ್ಚುವವನಾಗಿರಲಿಲ್ಲ ಮತ್ತು ಇದು ನ್ಯಾಯಬದ್ಧವಾದ ಅನ್ವಯ ಎಂಬುದನ್ನು ತೋರಿಸಲು ಬಳಸಬಹುದು. ಈ ವಿವರಣೆಯ ಮೂಲ ಉದ್ದೇಶವು ಅದ್ಭುತ ಕಾರ್ಯದ ಸ್ವಭಾವವನ್ನು ಒತ್ತಿ ಹೇಳುವುದಾಗಿದೆ. ಹತ್ತು ಹದಿನೈದು ಸಾವಿರ ಜನರಿಗೆ ಅಲ್ಪ ಒದಗಿಸುವಿಕೆಯಿಂದ ಊಟಮಾಡಿಸುವದಷ್ಟೇ ಅಲ್ಲ, ಆದರೆ ಆರಂಭಕ್ಕಿಂತಲೂ ಕೊನೆಯಲ್ಲಿ ಹೆಚ್ಚಿನ ಆಹಾರವು ಉಳಿಯಿತು!

ದುರದೃಷ್ಟವಶಾತ್, ನಿಜವಾಗಿಯೂ ಅಲ್ಲಿ ಭೌತಿಕವಾಗಿ ಅದ್ಭುತಕಾರ್ಯವು ಸಂಭವಿಸುವುದು ಎಂದು ನಿರಾಕರಿಸುವವರು ಅಲ್ಲಿದ್ದರು. ಅಲ್ಲಿದ್ದ ಚಿಕ್ಕ ಬಾಲಕನು ನಿಸ್ವಾರ್ಥತೆಯಿಂದ ತನ್ನ ರೊಟ್ಟಿ ಮೀನುಗಳನ್ನು ಕೊಟ್ಟು ಬಿಟ್ಟ ಮೇಲೆ ಅನೇಕರು ಕೊನೆಯಲ್ಲಿ ಇತರರೊಡನೆ ಹಂಚಿಕೊಳ್ಳಲೆಂದು ಗುಪ್ತವಾದ ಆಹಾರವನ್ನು ತಮ್ಮ ನಿಲುವಂಗಿಯ ಅಡಿಯಲ್ಲಿ ಬಚ್ಚಟ್ಟುಕೊಂಡಿದ್ದರು ಎಂದು ಕೆಲವರು ಈ ವಿಚಾರವನ್ನು ಪ್ರಚಾರಮಾಡಿದರು.[38] ಮೇಲ್ಮಾತಿಗೂ ಕೂಡಾ ಈ “ವಿವರಣೆಯನ್ನು” ಮಾಡಲಾಗದು. ತಮ್ಮ ಆಹಾರವನ್ನು ಹಂಚಿಕೊಳ್ಳುವಲ್ಲಿ ನಾಚಿಕೆಯಾಗಬೇಕೆಂದು ಈ ಎಲ್ಲವನ್ನೂ ಯೇಸುವು ಮಾಡಿದ್ದಾದರೆ, ಅದು ಅವರು ಆತನನ್ನು ಅರಸನನ್ನಾಗಿ ಮಾಡುವ ಹಂಬಲವು ಇದನ್ನು ವಿವರಿಸುವುದು ಅಸಾಧ್ಯ ವಾದದ್ದಾಗುತ್ತಿತ್ತು (ಯೋಹಾನ 6:15). ಯಾವುದೇ ಆಹಾರವು ಅಲ್ಲಿ ಉತ್ಪತ್ತಿಯಾಗದೆ ಇದಿದ್ದಾದರೂ ಅದು ಅಲ್ಲಿಂದ ಈಗಾಗಲೇ ಹೊರಗೆಹೋಗುತ್ತಿರಲಿಲ್ಲ, ಹೆಚ್ಚಿನ ರೊಟ್ಟಿಗಾಗಿ ಅವನನ್ನು ಎದುರುನೋಡುವುದಕ್ಕೆ ಅವರಿಗೆ ಯಾವುದೇ ಕಾರಣವು ಇದ್ದಿರಲಿಲ್ಲ. ಇತರ ಸಾಮಾನ್ಯವಾದ ವಿವರಣೆಯು ಸೂಚಿಸಲಾಗಿತ್ತು,[39] ಆದರೆ ಯೇಸು ಅದ್ಭುತ ಕಾರ್ಯದಂಥ *ಸೂಚಕಕಾರ್ಯಗಳನ್ನು* ಮಾಡಿದಾಗ ಯೋಹಾನನು ಬೋಧನೆಯನ್ನು ಸಹ ಎಲ್ಲರೂ ನಿಕಾಕರಿಸಿದರು (ಯೋಹಾನ 6:14; ಒತ್ತಿ ಹೇಳಿದ್ದು ನನ್ನದು). ಸತ್ಯವೇದಿಯ ವಿವರಣೆಯು ಸ್ಪಷ್ಟವಾಗಿದೆ: ಯೇಸು ಬಾಲಕನ ತಿಂಡಿಯನ್ನು ತಕ್ಕೊಂಡನು ಮತ್ತು ಅದನ್ನು ದ್ವಿಗುಣ ಮಾಡಿ ಸಾವಿರಾರು ಜನರಿಗೆ ಉಣಬಡಿಸಿದನು!

**ಇತರರಿಗೆ ಸಹಾಯ ಮಾಡದೇ ಇರುವ ನೆವಗಳನ್ನು ದೂರವಿರಿಸಿರಿ**

ತಿರುಗೊಂದಾವರ್ತಿ, ಕರ್ತನಲ್ಲಿ ಅಲ್ಪವಾಗಿದ್ದರೂ ಅದು ಹೆಚ್ಚೇ ಎಂದು ನಾವು ಒತ್ತಿ ಹೇಳಬಹುದಾಗಿದೆ. ನಾವು ಏನನ್ನು ಹೊಂದಿಲ್ಲವೋ ಮತ್ತು ಯಾವುದನ್ನು ಮಾಡಲು ಸಾಧ್ಯವಿಲ್ಲವೋ ಎಂಬುದರ ಬಗೆಗೆ ದೂಷಿಸುವುದನ್ನು ನಾವು ನಿಲ್ಲಿಸುವಾ. ಬದಲಾಗಿ, ನಾವು ಹೊಂದಿರುವುದನ್ನು ಮತ್ತು ನಾವು ಇತರರಿಗೆ ಏನನ್ನು ಸಹಾಯಮಾಡಲು ಸಾಧ್ಯವೋ ಅದನ್ನು ಬಳಸಿಕೊಳ್ಳುವಾ - ಮತ್ತು ಆತನು ನಮ್ಮ ಸಂಪನ್ಮೂಲಗಳ್ನು ಹೇಗೆ ಹೆಚ್ಚಿಸುವನು ಮತ್ತು ನಂತರ ಅದರ ಪರಿಣಾಮಕ್ಕಾಗಿ ಆಶ್ಚರ್ಯಪಡಿಸುವದಕ್ಕೆ ಸಿದ್ಧರಾಗಿರಿ!

## ಮುಕ್ತಾಯ

ಜೀವನದಲ್ಲಿ ಯಾವುದೇ ಸವಾಲನ್ನು ಎದುರಿಸಲು ಅವರಿಗೆ ಆತನು ಸಹಾಯಿಸುವನು ಎಂದು ಕಲಿಯಲು ಈ ಅನಭವದಂದ ತನ್ನ ಅಪೊಸ್ತಲರು ಕಲಿತುಕೊಳ್ಳಬೇಕೆಂದು ಯೇಸು ಬಯಸಿದ್ದನು (ನೋಡಿರಿ ಮಾರ್ಕ 6:52). ಸತ್ಯವನ್ನು ಗ್ರಹಿಸುವಲ್ಲಿ ಅವರು ಕಷ್ಟದಲ್ಲಿದ್ದರು, ಆದರೆ, ನಾವು ಬಲು ಶೀಘ್ರವಾಗಿ ತಿಳುಕೊಳ್ಳವವರಾಗಿದ್ದೇವೆ. ನೆವಗಳನ್ನು ಕೊಡುವುದನ್ನು ಯಾವಾಗ ನಿಲ್ಲಿಸುತ್ತೇವೆಯೋ ಮತ್ತು ನಾವು ಮಾಡುವುದನ್ನು ಮಾಡಲು ಯಾವಾಗ ಆರಂಭಿಸುತ್ತೇವೆಯೋ ಆಗಲೇ ನಾವು ಕಲಿಯುತ್ತೇವೆ ಎಂದು ನಾನು ಆಶಿಸುವವನಾಗಿದ್ದೇನೆ. ದೇವರು ನಮ್ಮ ಶ್ರಮವನ್ನು ಆಶೀರ್ವದಿಸುವವನಾಗಿದ್ದಾನೆ ಮತ್ತು ಇತರರ ಜೀವಿತವನ್ನೂ ಸಹ ಆಶೀರ್ವದಿಸಲಿ.

ಇತರರಿಗೆ ಸಹಾಯಿಸುವದರ ಮೇಲಿನ ನನ್ನ ಈ ಪ್ರಸಂಗವು ಐದು ರೊಟ್ಟಿ ಮತ್ತು ಎರಡು ಮೀನು ಆಗಿದೆ, ಇದರ ಮಿತಿಗಳಿಂದ ನಾನು ಎಚ್ಚರದಿಂದಿದ್ದೇನೆ. ಅದರ ಒಳಗನ್ನೂ ಮತ್ತು ಅದನ್ನು ಕೂಡ ನಾನು ಬಲ್ಲವನಾಗಿದ್ದೇನೆ, ಇದನ್ನು ಕಳುಹಿಸಿದಾತನಿಗಾಗಿ ಇದ ಎಂದಿಗೂ ಸಾವಿರಾರು ಹೃದಯಗಳನ್ನು ತುಂಬುವುದು. ಆದ್ದರಿಂದ, ದೇವರು ಇದನ್ನು ಆಶೀರ್ವದಿಸಲಿ ಮತ್ತು ಅದರ ಉಪಯೋಗವು ಹೆಚ್ಚಾಗಲಿ ಎಂದು ನಾನು ಪ್ರಾರ್ಥಿಸುವವನಾಗಿದ್ದೇನೆ. ಎಲ್ಲಕ್ಕಿಂತಲೂ ಮೇಲಾಗಿ, ಜನರಿಗೆ ಅವಶ್ಯಕತೆಯು ಇದೆ. ಎಂದೂ, ನಾವು ಆ ಅವಶ್ಯಕತೆಗಳನ್ನು ನೀಗಿಸುವಂತೆಯೂ ನಮ್ಮಲ್ಲಿ ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳುವಂತೆಯೂ ನಾನು ದೇವರಿಗೆ ಪ್ರಾರ್ಥಿಸುವವನಾಗಿದ್ದೇನೆ, ಮತ್ತು ಕರ್ತನ ಸಹಾಯದಿಂದ ನಾವು ಆ ಅವಶ್ಯಕತೆಗಳನ್ನು ನೀಗಿಸುವಾ![40]

---

## ಮಾಹಿತಿ

ಈ ಮಂಡನೆಯಲ್ಲಿ, ಸಾಮಾನ್ಯ ರೀತಿಯಲ್ಲಿ ಅವಶ್ಯವಿದ್ದವರಿಗೆ ಸಹಾಯಿಸುವುದನ್ನು ನಾನು ಒತ್ತಿ ಹೇಳಿದ್ದೇನೆ. “ಜನರು ಸಹಾಯಕ್ಕೆ ಯೋಗ್ಯರಲ್ಲದಿದ್ದಾಗ” ಎಂದು ಇತರರಿಗೆ ಸಹಾಯಿಸುವ ಒಂದೇ ವಿಷಯದ ಮೇಲೆ ನೀವು ಕೇಂದ್ರಿಕರಿಸಬಹುದು. ನೀನು ಕಥಾನಕ ಪ್ರಸಂಗದಲ್ಲಿ ಸಂತೋಷಿಸುವವರಾಗಿದ್ದರೆ, ಯಾವ ಬಾಲಕನ ತಿಂಡಿಯನ್ನು ಯೇಸು ಹೆಚ್ಚಳಮಾಡಿದನೋ ಆ ದೃಷ್ಟಿಕೋನದಿಂದ ಕಥೆಯನ್ನು ಹೇಳಲು ಪ್ರಯತ್ನಿಸಿರಿ. ಶೀರ್ಷಿಕೆಗೆ ಅಲ್ಪ ತಿರುಚನ್ನು ನೀವು ಇಟ್ಟದ್ದಾದರೂ, ನೀವು ಈ ಪ್ರಸಂಗವನ್ನು “ಹತ್ತು ಸಾವಿರ ಜನರಿಗೆ ಊಟಮಾಡಿಸಿದ್ದು” ಎಂದು ಕರೆಯಬಹುದು.

---

ಟಿಪ್ಪಣಿಗಳು

[1]ಯೇಸು ಮಾಡಿದ ಸಾವಿರ ಅದ್ಭುತ ಕಾರ್ಯಗಳಲ್ಲಿ ಅದನ್ನು ಪರಿಗಣಿಸುವಾಗ ಪುನರಾ ವರ್ತನೆಯು

ಮಹತ್ವವನ್ನು ಸೇರಿಸುವುದಾಗಿದ್ದು, ಯೋಹಾನನು ಕೇವಲ ಏಳನ್ನು ಮಾತ್ರ ಆರಿಸಿಕೊಂಡಿದ್ದಾನೆ ಮತ್ತು ಸಿನಾಪ್ಟಿಕ್ (ಮತ್ತಾಯ ಮಾರ್ಕ ಅಥವಾ ಲೂಕರ ಸುವಾರ್ತೆಗಳು) ಸುವಾರ್ತೆಯ ವಿವರವು ದಾಖಲಿಸದಂತಹ ಪುನರುಕ್ತಿಯನ್ನು ಯೋಹಾನನು ಸಾಮಾನ್ಯವಾಗಿ ಉದ್ದೇಶ ಪೂರ್ವಕವಾಗಿ ಅಲಕ್ಷಿಸಿದ್ದಾನೆ. (*ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ ಸಿಕ್ಕುವ "ಯೋಹಾನನ ಪುಸ್ತಕ" ಪಾಠವನ್ನು ಅಧ್ಯಯನ ಮಾಡಿರಿ.) [2]ಏನಾದರೂ ಹೊಸದೊಂದನ್ನು ಕ್ರಿಸ್ತನು ಸೃಷ್ಟಿಸಿದ್ದೇಯಾದರೆ ಅದನ್ನು ರಚನಾತ್ಮಕ ಅದ್ಭುತ ಕಾರ್ಯವೆನ್ನುತ್ತಾರೆ. ಇನ್ನೊಂದು ಉದಾಹರಣೆಯು ನೀರನ್ನು ದ್ರಾಕ್ಷಾರಸವನ್ನಾಗಿ ಪರಿವರ್ತಿಸಿದ್ದೇ ಆಗಿದೆ. [3]ಹಿಂದಿನ ಪಾಠದಲ್ಲಿ, ನಂಬಿಕೆ ಪರೀಕ್ಷೆಯ ನಿಲುವಿನಿಂದ ಆ ಘಟನೆಯತ್ತ ನಾವು ನೋಡಿದ್ದೇವೆ. [4]2 ಥೆಸಲೋನಿಕ 3ರಲ್ಲಿನ ಪೌಲನ ಬೋಧನೆಯ ಪ್ರಕಾರ, ಕೆಲವರಿಗೆ ನಾವು ಸಹಾಯ ಮಾಡಕೂಡದು ಯಾಕೆಂದರೆ ಹಾಗೆ ಮಾಡುವದು ಅವರಲ್ಲಿ ಸೋಮಾರಿತನವನ್ನು ಆಲಸ್ಯವನ್ನು ಪ್ರೋತ್ಸಾಹಿಸಿದಂತಾಗುತ್ತದೆ. ನಾನು ಇದನ್ನು ಸಂಕ್ಷಿಪ್ತವಾಗಿ ಹೇಳು ವವನಾಗಿದ್ದೇನೆ (ಮತ್ತು ಈ ವಿಚಾರವನ್ನು ನೀನು ವಿಸ್ತರಿಸಬಹುದು), ಆದರೆ ಈ ಪ್ರಸಂಗದಲ್ಲಿ ನನ್ನ ಉದ್ದೇಶವ ನಕಾರಾತ್ಮ ಕತೆಗಿಂತಲೂ ಸಕಾರಾತ್ಮಕ ಅಂಶದಿಂದ ಸಹಾಯಮಾಡುವುದನ್ನು ಒತ್ತಿ ಹೇಳುವುದೇ ಆಗಿದೆ. ನಾನು ನೈಜವಾದ ಸ್ವಾಭಾವಿಕವಾದ ನ್ಯಾಯಬದ್ಧವಾದ ಅವಶ್ಯಕತೆಯನ್ನು ಸೂಚಿಸುವಾಗ, ಆ ಅವಶ್ಯಕತೆಗಳು ನಾವು ಆತ್ಮೀಕವಾಗಿ ಉದ್ದೇಶಿಸುವಂತವಾಗಿರುತ್ತವೆ. [5]"ಯೇಸು ವಿನ ಸೇವೆಯಲ್ಲಿ ಹೆರೋದ ಆಸಕ್ತಿ" ಇದಕ್ಕಾಗಿ ಮುಂದೆ ಈ ಪುಸ್ತಕದಲ್ಲಿ ಸಿಕ್ಕುವ "ಯಶಸ್ಸಿನ ಅಪಾಯ" ಎಂಬ ಪಾಠವನ್ನು ನೋಡಿರಿ. [6]ಈ ಹೇಳಿಕೆಗಳು ಅವರ ಪ್ರಯಣವು ಪ್ರಾರಂಭವಾಗಿದ್ದರತ್ತ ಅಥವಾ ಕಪೆರ್ನೌಮಿನ ಹತ್ತರದಲ್ಲಿ ಇರುವ ಈ ಊಹೆಯು ಮೇಲೆ ಮೂಲವಾಗಿವೆ. ಈ ಪುಸ್ತಕದಲ್ಲಿ ಸಿಕ್ಕುವ "ಯೇಸುವಿನ ಸೇವೆಯ ಆರಂಭದಲ್ಲಿ ಪ್ಯಾಲಿಸ್ಟೈನ್" ಎಂಬ ನಕಾಶೆಯನ್ನು ನೋಡಿರಿ. ಸಮುದ್ರದ ಪೂರ್ವದ ಭಾಗವನ್ನು ಬಿಟ್ಟು ಹೋದುದರ ಯೇಸುವಿನ ಉದ್ದೇಶವನ್ನು ನೀವು ಪುನರಾವರ್ತಿತಗೊಳಿಸಲು ಬಯಸಬಹುದು. (ಈ ಪುಸ್ತಕದಲ್ಲಿ ಸಿಕ್ಕುವ "ಯಶಸ್ಸಿನ ಆಪಾಯ" ಎಂಬ ಪಾಠವನ್ನು ನೋಡಿರಿ.) [7]ಆ ಪ್ರದೇಶಕ್ಕೆ ಚಿರಪರಿಚಿತವಿದ್ದವರು ಇದು ಯಾವ ವಿಶೇಷ ಸಮಸ್ಯೆಗಳನ್ನು ಪ್ರಸ್ತುತಪಡಿಸಿತು ಎಂದು ನಮಗೆ ಆಶ್ವಾಸನೆಯನ್ನು ಕೊಡುವವರಾಗಿದ್ದಾರೆ. ಯೊರ್ದಾನನ್ನು ಕೆಲವರು ಕಾಲ್ನಡಿಗೆಯಿಂದ ದಾಟಿದರು, ಆದರೆ ನದಿಯು ಗಲಿಲಾಯ ಸಮುದ್ರವನ್ನು ಎಲ್ಲಿ ಸೇರುವದೋ ಅಲ್ಲಿ ಉತ್ತರದಲ್ಲಿ ಸ್ವಲ್ಪ ಅಂತರದಲ್ಲಿ ಖಾಲಿಯು ಇದೆ. [8]ನಾನು ಟೀಕಿಸುವವನಾಗಿರಬೇಕೆಂದು ಯೋಚಿ ಸುತ್ತಿಲ್ಲ. ಯೇಸು ಜನರ ಗುಂಪಿಗೆ ಊಟ ಕೊಡಲು ಸೂಚಿಸಿದಾಗ, ಶಿಷ್ಯರ ಪ್ರತಿಕ್ರಿಯೆಯು ಅವರನ್ನು ಅಲ್ಲಿಂದ ಕಳಿಸುವುದೇ ಆಗಿತ್ತು (ಮಾರ್ಕ 6:36). [9]ಈ ಪ್ರಸಂಗದ ಮೇಲೆ ಕೆಲಸಮಾಡುವಾಗ, ನಾನು ಮಾಡುತ್ತಿರುವ ಕಾರ್ಯವನ್ನು ಬಿಡಬೇಕು ಮತ್ತು ಅವಳಿಗೆ ಸಹಾಯ ಮಾಡಲಿಕ್ಕಾಗಿ ಒಂದು ತಾಸು ಅಥವಾ ಅದಕ್ಕಿಂತ ಹೆಚ್ಚಿನದನ್ನು ತೆಗೆದುಕೊಳ್ಳಬೇಕು ಎಂದು ಒಬ್ಬ ಸ್ತ್ರೀಯಿಂದ ಇದರ ಬಗ್ಗೆ ಯೋನನಿಗೆ ಒಂದು ದೂರವಾಣಿಯ ಕರೆಯು ಬಂದಿತು. ಯೇಸುವಿನ ಉದಾಹರಣೆಯು ನನ್ನ ಮನದಲ್ಲಿ ಹಸಿರಾಗಿದ್ದುದರಿಂದ ನನಗೆ ಯಾವ ಆಯ್ಕೆಯೂ ಇರಲಿಲ್ಲ. ನಾನು ಅವಳಿಗೆ ಸಹಾಯಿಸಿದೆನು. [10]"ಕುರುಬನಿಲ್ಲದ ಕುರಿ" ಈ ಪದದ ಮೇಲಿನ ಹೆಚ್ಚಿನ ವಿವರಣೆಗಾಗಿ ಈ ಪುಸ್ತಕದಲ್ಲಿ ಸಿಕ್ಕುವ "ಯಶಸ್ಸಿನ ಅಪಾಯ" ಎಂಬ ಪಾಠವನ್ನು ನೋಡಿರಿ.

[11]KJVಯಲ್ಲಿ, "ಆತನು ಅವರನ್ನು ಸ್ವಾಗತಿಸಿದನು" ಎಂದಿದೆ. [12]ಯೆಹೂದ್ಯರ "ಪಸ್ಕಹಬ್ಬವು ಹತ್ತಿರವಾಗಿತ್ತು" ಎಂದು ಯೋಹಾನನು ವಿವರಿಸಿದ್ದಾನೆ (ಯೋಹಾನ 6:4). ಯೆರೂಸಲೇಮಿನ ಮಾರ್ಗದಲ್ಲಿರುವ ಯಾತ್ರಿಕರು ಅಲ್ಲಿ ನಡೆಯುವ ಕೂತುಹಲವೇನು ಎಂದು ನೋಡಲು ನಿಂತಿದ್ದರಿಂದ ಜನರ ಗುಂಪು ಹೇಗೆ ಹೆಚ್ಚಾಯಿತು ಎಂದು ವಿವರಿಸಲಿಕ್ಕಾಗಿ ಇದು ಬರೆಯಲಾಯಿತು ಎಂದು ಇದು ಸೂಚಿತವಾಗಿದೆ. ಇದರೊಂದಿಗಿನ ಸಮಸ್ಯೆಯೆಂದರೆ ಇವುಗಳು ಅವರಿಗೆ ಅವರೊಡನೆ ಇರಬಹುದಾದಂಥ ವಿಪುಲವಾದ ಪೂರೈಕೆಗಳು ಆಗಿದ್ದವು, ಆದರೆ ದಿನದ ಅಂತ್ಯದಲ್ಲಿ ಜನರ ಗುಂಪಿನ ಸಮೀಕ್ಷೆಯನ್ನು ನಡೆಸಿದಾಗ, ಯಾವ ಪೂರೈಕೆಯೂ ಪುರಾವೆಯಾಗಿ ಇರಲಿಲ್ಲ. ಈ ವಿವರಣೆಯು ಆ ಪ್ರದೇಶದಲ್ಲಿ ಯಾಕೆ "ಅಷ್ಟೊಂದು ಹುಲ್ಲು" ಬೆಳೆದಿರುವದು ಎಂಬುದನ್ನು ವಿವರಿಸುವದಕ್ಕಾಗಿ ಕೇವಲ ವರ್ಷದ ಆ ಸಮಯವನ್ನು ಒತ್ತಿ ಹೇಳುವುದಕ್ಕಾಗಿ ಇರುವುದಾಗಿದೆ (ಯೋಹಾನ 6:10). [13]ಇತರರು "ಬುದ್ಧಿ ಹೀನರು" ಎಂದು ಹೇಳುತ್ತಿರುವಾಗ ಕೆಲ ಸ್ತ್ರೀಯರು ಮತ್ತು ಮಕ್ಕಳು ಆ ದೊಡ್ಡ ಓಟವನ್ನು ಓಡಿದ್ದರು ಎಂದು ಕೆಲವರು ಯೋಚಿಸುವವರಾಗಿದ್ದಾರೆ! [14]ಯೇಸು ನಿಜವಾಗಿಯೂ ಅದ್ಭು ತಕಾರ್ಯಗಳನ್ನು ಮಾಡಿದನು ಎಂದು ನಂಬದ ಉದಾರತ್ವದ ವೀಕ್ಷಕರು "ಜನರು ಆಹಾರವನ್ನು ತಕ್ಕೊಳ್ಳದೆ ಇಷ್ಟು ಉದ್ದನೆಯ ಪ್ರಯಾಣವನ್ನು ಮಾಡಲಾರರು" ಎಂದು ಹೇಳುವುದನ್ನುಕಾಣುತ್ತೇವೆ. ಹೇ ಗೋ ಈ ಚಿತ್ರವು ಸುವಾರ್ತಾ ವಿವರಣೆಯ ಲೇಖಕರಿಂದ ಚಿತ್ರಿಸಲ್ಪಟ್ಟ ಚಿತ್ರವು ಇದಾಗಿದ್ದುದರಿಂದ ಯೇಸುವಿನ ಭಾಗದಲ್ಲಿಯು ಮತ್ತು ಜನರ ಗುಂಪಿನ ಭಾಗದಲ್ಲಿಯೂ ಎರಡೂ ಕಡೆಗಳಲ್ಲಿ ಆತುರವು ಇರುವುದಾಗಿದೆ. [15]ಬಿಸ್ಕಿಟ್ಸ್ ಮತ್ತು ಕಾರ್ನ್‌ಬ್ರೆಡ್ ಇವೆರಡೂ ನಾನು ಇರುವ ಪ್ರದೇಶದಲ್ಲಿನ ಬ್ರೆಡ್‌ಗಳು

ಆಗಿವೆ. ನೀವು ಇರುವೆಡೆಗಿನ ಬ್ರೆಡ್‌ಗಳನ್ನು ಬದಲಾಗಿ ಬಳಸಬಹುದು. [16]ಗಲಾತ್ಯ 6:10 "ಒಳ್ಳೆಯದನ್ನು" ಮಾಡುವುದನ್ನು ಸಾಮನ್ಯಾರ್ಥದಲ್ಲಿ ಮಾತನಾಡುವುದಾಗಿದೆ; ಜನರ ಅವಶ್ಯಕತೆಗಳಿಗೆ ಅನುಗುಣವಾಗಿ ಸಹಾಯಮಾಡುವದು ನಮಗೆ ಅವಶ್ಯವಿದೆ ಎಂದು 1 ಥೆಸಲೋನಿಕ 5:14 ಸಹ ಸೂಚಿಸುವುದಾಗಿದೆ. ಈ ಪರಿಚ್ಛೇದದಲ್ಲಿ ನಾನು ಸೂಚಿಸಿದ ಅವಶ್ಯಕತೆಗಳನ್ನು ನಾನಿರುವ ಸ್ಥಳದ ಸುತ್ತಲೂ ಕಾಣುವವನಾಗಿದ್ದೇನೆ. ನಿಮ್ಮ ಸ್ಥಳಕ್ಕೆ ಅನುಗುಣವಾಗಿ ಇದನ್ನು ಎರವಲು ಪಡೆದುಕೊಳ್ಳಿರಿ ಆಹಾರ, ಬಟ್ಟೆ, ಮತ್ತು ಅದರ ಹಾಗೆ ಇರುವಂಥವು ಮತ್ತು ಅದರ ಹಾಗಿರುವವುಗಳು ಇನ್ನೂ ಹೆಚ್ಚಾಗಿ ಒತ್ತಿ ಹೇಳುವವು ಆಗಿರುವಂಥ ಈ ಹಿಂದೆ ಸೂಚಿತ ವಾದ ಮೂಲ ಅವಶ್ಯಕತೆಗಳು ನೀನಿರುವೆಡೆ ಇರುವವು ಆಗಿವೆ. [17]ಕರ್ತನು ಯಾವುದೇ ಸಮಯದಲ್ಲಿ ಸವಾಲನ್ನು ಇರಿಸುವವನಾಗಿದ್ದಾನೆ, ಆತನು ಈಗಾಗಲೇ ಪರಿಹಾರವನ್ನ ಹೊಂದಿದ್ದಾನೆ. ಅವು ಏನೆಂದು ನೀವು ಕೇವಲ ಕಂಡುಕೊಳ್ಳುವವರಾಗಿರಬೇಕು! [18]ಪಿಲಿಪ್ಪನು ಯೇಸುವಿನ ಮೊದಲ ಶಿಷ್ಯರಲ್ಲಿ ಒಬ್ಬನು ಆಗಿದ್ದನು. (*ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿ ಸಿಕ್ಕುವ "ಮೊದಲ ಸಾರಿ ಎಲ್ಲವೂ" ಎಂಬ ಪಾಠವನ್ನು ಪುನರಾವರ್ತಿಸಿರಿ.) [19]ಪಿಲಿಪ್ಪನು ಬೆತ್ಸಿದದವನು ಆಗಿದ್ದನು (ಯೋಹಾನ 1:44; 12:21), ಇದು ಕಪೆರ್ನೌಮಿನ ಪ್ರಾಂತವಾಗಿದ್ದಂಥ ಬೆತ್ಸಿದವಾಗಿರಬಹುದು, ಆದರೆ ಸಮುದ್ರದ ಪೂರ್ವಭಾಗದಲ್ಲಿರುವ ಬೆತ್ಸಿದವು (ಐದು ಸಾವಿರ ಜನರಿಗೆ ಊಣಬಡಿಸಿದಂಥ ಸ್ಥಳವಾದ ಲೂಕ 9:10) ಇದಾಗಿರುವ ಸಾಧ್ಯತೆಯೂ ಇದೆ. [20]ಪಿಲಿಪ್ಪನ ನಿಖರವಾದ ಯೋಚನೆಯು ಏನಾಗಿತ್ತು ಎಂಬುದು ನಮಗೆ ತಿಳಿಯದು; ಆದರೆ ನನ್ನ ಸ್ಥಳದಲ್ಲಿ ನಾವು ಬಹುವಾದ ವಿಶೇಷಣಗಳನ್ನು ಹೊಂದಿದ್ದು ಅವುಗಳು ಆತನೇನು ಮಾಡಿದನೆಂಬುದನ್ನು "ಆತನು ಸಮಸ್ಯೆಗೆ ಒಂದು ಪೆನ್ಸಿಲ್‌ನ್ನು ಇಟ್ಟನು" ಎಂಬಂತೆ ವಿವರಿಸುವವು ಆಗಿವೆ. ಈ ಸಂದರ್ಭಕ್ಕೆ ಯೋಗ್ಯವಾಗಿರುವ ಹಾಗೆ ಜನರ ಬಗೆಗೆ ಕಾಳಜಿಯಿರುವುದಕ್ಕಿಂತ ಹೆಚ್ಚಗಿ ಆರ್ಥಿಕ ವ್ಯವಸ್ಥೆಯ ("ಬೀನ್ಸ್") ಬಗಗೆ ಕಾಳಜಿಯಿರುವ "ಬೀನ್ ಕೌಂಟರ್" ಇದಕ್ಕೆ ತಕ್ಕಂತ ವಿವರಣೆಗಳನ್ನು ಸಹ ಹೊಂದಿವೆ.

[21]ಇದೊಂದು ಸರಳ ಗಣಿತ ಸಮಸ್ಯೆಯ ಕೆಳಸ್ಥಳವನ್ನು ಸೂಚಿಸುವುದಾಗಿದೆ. ಇದು ಮೊತ್ತವಾಗಿದ್ದು, ಅಂತಿಮ ಪರಿಣಾಮವಾಗಿದೆ. [22]ಯೇಸು ಮತ್ತು ಆತನ ಶಿಷ್ಯರು ಪ್ರಯಾಣಕ್ಕಾಗಿ ಬಳಸುತ್ತಿರುವ ಅಲ್ಪ ಹಣವಿರುವ ಪೆಟ್ಟಿಗೆ ಅಥವಾ ಚೀಲವಾಗಿರಬೇಕು. ಯೂದನು ಆ ಪೆಟ್ಟಿಗೆ ಅಥವಾ ಚೀಲದ ಮೇಲ್ವಿಚಾರಕನಾಗಿದ್ದನು (ಯೋಹಾನ 12:6; 13:29). [23]ಅಪೊಸ್ತಲರು ಸೂಚಿಸಿದ "ಇಳಕೊಳ್ಳುವದು" ಎಂಬುದರ ವಾಸ್ತವವು ಆ ಬಯಲಿನಲ್ಲಿ ಉಪಸ್ಥಿತವಿದ್ದ ಎಲ್ಲಾ ಸಾವಿರ ಜನರೂ ಆ ಪ್ರದೇಶದವರಲ್ಲಿ ಎಂಬುದಕ್ಕೆ ಪುರಾವೆಯಾಗಿದೆ. [24]ನನ್ನ ಭಾಗದಲ್ಲಿ ನಾವು "ಅವರು ಕೇವಲ ದಾನಕ್ಕಾಗಿ ಇರುವವರು" ಎಂದು ಹೇಳುತ್ತೇವೆ. [25]ಈ ಪುಸ್ತಕದಲ್ಲಿ ಮುಂದೆ ಸಿಕ್ಕುವ "ಪರೀಕ್ಷೆಗಾಗಿನ ಸಮಯ" ಎಂಬ ಪಾಠವನ್ನು ನೋಡಿರಿ. [26]"ನಾವು ಯಾರಾಗಿದ್ದೇವೆಂಬ ಕಾರಣದಿಂದ" ಎಂದು ಸಹ ಈ ಪದವು ಆಗಬಹುದು. [27]ನನ್ನ ಪ್ರದೇಶದಲ್ಲಿ ನಾವು ಎಂದು ಹೇಳುತ್ತೇವೆ. [28]ಈ ಪುಸ್ತಕದಲ್ಲಿ ಮುಂದೆ ಸಿಕ್ಕುವ "ಪರೀಕ್ಷೆಗಾಗಿನ ಸಮಯ" ಎಂಬ ಪಾಠವನ್ನು ನೋಡಿರಿ. [29]"ಕ್ರಾಕರ್" ಆ ಪದವು ಅಮೇರಿಕಾದಲ್ಲಿಯೂ ಜಗತ್ತಿನಲ್ಲಿಯ ಕೆಲ ಪ್ರದೇಶದಲ್ಲಿ ಸಿಕ್ಕುವ "ರುಚಿಕರವಾದ ಬಿಸ್ಕಿಟ್‌ಗೆ" ಕರೆಯಲು ಬಳಸುತ್ತಾರೆ. [30]ನಾವು ಇರುವಲ್ಲಿ ಸಾರ್ಡಿನಿಯಾದ ಚಿಕ್ಕ ಮೀನುಗಳು ಕ್ಯಾನನಲ್ಲಿ ಮಾರಲ್ಪಡುತ್ತವೆ. ಒಂದು ಸಣ್ಣ ಡಬ್ಬಿಯಲ್ಲಿ ಡಝನ್ ಮೀನುಗಳು ಇರುತ್ತವೆ.

[31]"ಆ ಸ್ಥಳದಲ್ಲಿ ಬಹಳ ಹುಲ್ಲು ಬೆಳೆದಿತ್ತು" ಎಂಬ ಯೋಹಾನನ ಸೇರಿಸುವಿಕೆಯು ಜನರು ಯಾಕೆ ಆ ಪ್ರದೇಶದಲ್ಲಿ ಕೂತುಕೊಳ್ಳಲು ಒಪ್ಪಿದರು ಎಂಬುದಕ್ಕೆ ಪ್ರತ್ಯಕ್ಷದರ್ಶಿಯೊಬ್ಬನು ವಿವರಣೆಯನ್ನು ನೀಡುತ್ತಿದ್ದಾನೆ (ಮತ್ತಾಯ 14:19; ಮಾರ್ಕ 6:39ನ್ನು ಸಹ ನೋಡಿರಿ). [32]ಈ ಸಂದರ್ಭದಲ್ಲಿ ಯೇಸುವಿನ ಉದಾಹರಣೆಯು ನಮ್ಮ ಆಹಾರಕ್ಕೋಸ್ಕರ ಅದು ಒಂದು ವೇಳೆ ಕ್ವಚಿತ್ತಾಗಿದ್ದಾದರೂ ಕೂಡಾ ಸ್ತೋತ್ರ ಹೇಳಬೇಕೆಂದು ನಮಗೆ ಕಲಿಸುವುದಾಗಿದೆ. ಯೆಹೂದ್ಯರಲ್ಲಿ "ಸ್ತೋತ್ರವನ್ನು ಹೇಳದೇ ಸಂಗತಿಗಳಲ್ಲಿ ಆನಂದಪಡುವವನು ದೇವರನ್ನು ಕೊಳ್ಳೆ ಹೊಡೆಯುವವನಾಗಿದ್ದಾನೆ" ಎಂಬ ಹೇಳಿಕೆಯು ಇದೆ. (William Barclay, *The Gospel of Luke,* rev. ed., The Daily Study Bible Series [Philadelphia: Westminster Press, 1975], 118). [33]William Barclay, *The Gospel of Matthew,* rev. ed., vol. 2, The Daily Study Bible Series (Philadelphia: Westminster Press, 1975), 100. [34]NASBಯು ಸರಿಯಾಗಿ ಗ್ರೀಕ್ ವೇದಭಾಗವು ಉಪಯೋಗಿಸಿದ ಕ್ರಿಯಾಪದದ ಪಾತ್ರವನ್ನು ಪ್ರತಿಬಿಂಬಿಸುವುದಾಗಿದೆ. [35]ಅಪೊಸ್ತಲರು ಬಳಸಿದ ಪುಟ್ಟಿಗಳು ಎಲ್ಲಿಂದ ಬಂದವು ನೀವು ಅಚ್ಚರಿಪಡಬಹುದು. ನಮ್ಮ ಸಮಯದಲ್ಲಿನ ಜನರು ಪರ್ಸ್ ಅಥವಾ ವಾಲ್ಲೆಟ್‌ಗಳು ತೆಗೆದುಕೊಂಡು ಹೋಗುವಂತೆ ಯೆಹೂದಿಗಳು ತಮ್ಮೊಡನೆ ಚಿಕ್ಕ ಪುಟ್ಟಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರು ಎಂದು ರೂಢಿಯಲ್ಲಿರುವ ಇತಿಹಾಸವು ಹೇಳುವುದಾಗಿದೆ. ದಿನವೊಂದಕ್ಕೆ ಅವಶ್ಯಕವಾಗುವ ವಸ್ತುಗಳನ್ನು ಇಟ್ಟುಕೊಳ್ಳಬಹುದಾದ ಚಿಕ್ಕ ಡಬ್ಬಿಯನ್ನು ತೆಗೆದುಕೊಂಡು ಹೋಗುವದು ಜಗತ್ತಿನ ಹೆಚ್ಚಿನ ಸ್ಥಳಗಳಲ್ಲಿ

ಸಂಪ್ರದಾಯವಾಗಿದೆ. ಆ ಪುಟ್ಟಿಗಳು ಶಿಷ್ಯರ ಸ್ವಂತವಾಗಿರಬಹುದು ಅಥವಾ ಗುಂಪಿನಲ್ಲಿನ ಯಾರಿಂದಲಾದರೂ ಎರವಲು ಪಡೆದಿರಬಹುದು. [36]ಯೇಸು ಉತ್ಪಾದಕನು ಮತ್ತು ಆತನ ಶಿಷ್ಯರು ಹಂಚಿಕೆದಾರರು ಎಂದು ಯಾರೋ ಕೆಲವರು ವರ್ಣಿಸುತ್ತಿದ್ದರು. [37]ಉಳಿದ ಆಹಾರವು ಏನಾಯಿತು? ಇದು ಮುಖ್ಯವಾದ ವಿಚಾರವಲ್ಲವಾದ್ದರಿಂದ, ಅದರ ವಿವರಣೆಯು ಹೇಳಲ್ಪಟ್ಟಿಲ್ಲ. ಹನ್ನೆರಡು ಬುಟ್ಟಿಗಳು ಅಪೊಸ್ತಲರಿಗೆ ಸೇರಿದ್ದಾದರೆ, ಮುಂದಿನ ವಾರಕ್ಕಾಗಿನ ಅವರ ಆಹಾರವು ಆಗಿರಬಹುದು. ಅವರು ಆ ಪುಟ್ಟಿಗಳನ್ನು ಎರವಲು ತಂದಿರಬಹುದು, ಉಳಿದವುಗಳನ್ನು ತುಂಬಿಡಲು ಅವರು ತಮ್ಮ ಬುಟ್ಟಿಗಳನ್ನು ಬಳಸಲು ಅವಕಾಶವಿದ್ದಿರಬಹುದು. ನಿಜವಾಗಿ, ಆ ಚಿಕ್ಕ ಬಾಲಕನು ಉಳಿದುದರಲ್ಲಿ ಹೆಚ್ಚಿನ ಭಾಗವನ್ನು ತೆಗೆದುಕೊಂಡಿರಬಹುದು. Warren Wiersbe ಹೀಗೆ ಬರೆಯುತ್ತಾರೆ, "ಆ ಬಾಲಕನು ಎಷ್ಟು ತುಂಡುಗಳನ್ನು ತನ್ನ ಮನೆಗೆ ಎತ್ತಿಕೊಂಡು ಹೋಗಿರಬಹುದು? ಎಂದು ನನಗೆ ಅಚ್ಚರಿಯಾಗುತ್ತದೆ. ಆತನು ತನ್ನ ತಾಯಿಗೆ ಆ ಕಥೆಯನ್ನು ಹೇಳಿದಾಗ ತಾಯಿಯ ಆ ಆಶ್ಚರ್ಯವನ್ನು ಊಹಿಸಿಕೊಳ್ಳಿರಿ!" (Warren Wiersbe, *The Bible Exposition Commentary,* vol. 1 (Wheaton, Ill.: Victor Books, 1989), 51. [38]ಯಾವುದೇ ಸೌಲಭ್ಯಗಳಿಲ್ಲದೇ ಈ ಯಾತ್ರೆಯನ್ನು ಮಾಡಿದ್ದರು ಎಂಬ ಈ ವಿಚಾರವನ್ನು ಧರ್ಮವಿರೋಧಿಗಳು ಅಪಹಾಸ್ಯಮಾಡುವವರಾಗಿದ್ದಾರೆ. ಆದರೆ ಸತ್ಯವೇದಿಯ ವಿವರಗಳ ಪ್ರಕಾರ ಅದು ಖಂಡಿತವಾಗಿ ಯೋಗ್ಯವಾದ ವಿಚಾರವಾಗಿದೆ. [39]ಇನ್ನೊಂದು "ವಿವರಣೆ" "ಮತ ಸಂಸ್ಕಾರದ ವಿವರಣೆ" ಎಂದು ಕರೆಯಲ್ಪಡುತ್ತಿದ್ದು; ಪ್ರತಿಯೊಬ್ಬರಿಗೂ ಒಂದು ತುಣುಕು ಅಥವಾ ಎರಡು ತುಣುಕು ರೊಟ್ಟಿ ಮತ್ತು ಮೀನು ಪಡೆದಿದ್ದರು ಆದರೆ ಅದು ಅವರನ್ನು ಹೇಗೂ ತೃಪ್ತಿಪಡೆಸಿತು. ಈ ಗ್ರಹಿಕೆಯು "ಅವರು ಸಂತೃಪ್ತರಾದರು" (ಯೋಹಾನ 6:11, 12) ಎಂಬ ಯೋಹಾನನ ಹೇಳಿಕೆಯೊಡನೆ ತದ್ವಿರುದ್ಧವಾಗಿದೆ ಮತ್ತು ನಂತರದಲ್ಲಿ ಹನ್ನೆರಡು ಪುಟ್ಟಿ ತುಣುಕುಗಳು ಹೇಗೆ ಉಳಿದವು ಎಂಬುದನ್ನು ವಿವರಿಸುವಲ್ಲಿ ವಿಫಲವಾಗಿವೆ! [40]ಹೇಗೋ ನೀವು ಈ ಪ್ರಸಂಗವನ್ನು ಬೆಳಸಿ, ಕರ್ತನೆಡೆಗೆ ಜನರು ಬರಲು ಪ್ರೋತ್ಸಾಹಿಸುವುದರ ಜೊತೆಗೆ ನೀವು ಮುಗಿಸಬಹುದು. ಏನೇ ಆಗಲಿ, ಅವರು ದೇವರೊಡನೆ ಸಂಬಂಧದ ಬಗೆಗೆ ಕಾಳಜಿಯನ್ನು ತೆಗೆದುಕೊಳ್ಳುವತನಕ ಇತರರಿಗಾಗಿ ಏನು ಮಾಡಬಹದೋ ಅದಕ್ಕಾಗಿ ಅವುಗಳು ಯಾವಾಗಲೂ ಮಿತಿಯುಳ್ಳವುಗಳು ಆಗಿರುತ್ತವೆ. ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38; ಮತ್ತು ಗಲಾತ್ಯ 3:26, 27 ರಂಥ ಪರಿಚ್ಛೇದಗಳನ್ನು ನೀವು ಬಳಸಬಹುದು.